# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..  ಕನ್ನಡ ವಾರಪತ್ರಿಕೆ


**ಸುಭಾಷಿತ:**

ಮೌನವು ಮನಸ್ಸನ್ನು ಶುದ್ಧಿ ಮಾಡುವುದು
ಸ್ನಾನವು ದೇಹವನ್ನು ಶುದ್ಧಿ ಮಾಡುವುದು
ಧ್ಯಾನವು ಬುದ್ಧಿಯನ್ನು ಶುದ್ಧಿ ಮಾಡುವುದು
ಸತ್ಯವು ಜ್ಞಾನವನ್ನು ಶುದ್ಧಿ ಮಾಡುವುದು
ಪ್ರಾರ್ಥನೆಯು ಆತ್ಮವನ್ನು ಶುದ್ಧಿ ಮಾಡುವುದು
ದಾನವು ಸಂಪಾದನೆಯನ್ನು ಶುದ್ಧಿ ಮಾಡುವುದು
ಉಪವಾಸ ಆರೋಗ್ಯವನ್ನು ಶುದ್ಧಿ ಮಾಡುವುದು
ಕ್ಷಮೆಯು ಸಂಬಂಧವನ್ನು ಶುದ್ಧಿ ಮಾಡುವುದು
ಧರ್ಮದ ದಾರಿ ಎಲ್ಲವನ್ನು ಶುದ್ಧಿ ಮಾಡುವುದು
ಮಾನವವೀಯತೆ ಸ್ವರ್ಗದ ದಾರಿ ತೋರಿಸುವುದು

**ಭಗವಾನ್ ಶ್ರೀಕೃಷ್ಣ**




PRGI No: KNKAN/25/A2498 www.karavalitharangini.com KARAVALI THARANGINI KANNADA Weekly Dakshina Kannada ದಿನಾಂಕ: 02-10-2026 to 08-10-2026 ಬೆಲೆ:10-00 ಸಂಪುಟ–2 ಸಂಚಿಕೆ–01 ಪುಟಗಳು–6






ಕ್ಷಣ ಕ್ಷಣದ ಸುದ್ದಿಗಳಿಗಾಗಿ
ಕರಾವಳಿ ತರಂಗಿಣಿ
ಪತ್ರಿಕಾ ಬಳಗದಿಂದ
ಅಂತರ್ಜಾಲ ಮಾಧ್ಯಮ
www.karavalitharangini.com
ಕರಾವಳಿ ತರಂಗಿಣಿ
ಮಂಗಳೂರು




ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಉಗ್ರರ ದಾಳಿಯ ನಂತರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದ ಫೋಟೋದಲ್ಲಿದ್ದ ಲಷ್ಕರ್–ಎ–ತೊಯ್ಬಾ ಭಯೋತ್ಪಾದಕ ಸಂಘಟನೆಯ ನಾಲ್ವರೂ ಉಗ್ರರನ್ನು ಭಾರತೀಯ ಭದ್ರತಾ ಪಡೆಗಳು ಸತತ ಕಾರ್ಯಾಚರಣೆಗಳ ಮೂಲಕ ಹತ್ಯೆಗೈದಿವೆ. ಬಡ್ಗಾಂ ಜಿಲ್ಲೆಯ ಪಲ್ಮೈದಾನ್ ಪ್ರದೇಶದಲ್ಲಿ ನಡೆದ 'ಆಪರೇಷನ್ ಕೊರಾಗ್' ಎನ್‌ಕೌಂಟರ್‌ನಲ್ಲಿ ಉಗ್ರ ಸಂಘಟನೆಯ ಪ್ರಮುಖ ಕಮಾಂಡರ್ ಹಾಸಿಮ್ ಮೂಸಾ ಅಲಿಯಾಸ್ ಫೌಜಿಯನ್ನು ಹೊಡೆದುರುಳಿಸುವುದರೊಂದಿಗೆ ಈ ಬೃಹತ್ ಕಾರ್ಯಾಚರಣೆ ಪೂರ್ಣಗೊಂಡಿದ್ದು, ಪಹಲ್ಗಾಮ್, ಗಗನ್‌ಗೀರ್ ಮತ್ತು ಗುಲ್ಮಾರ್ಗ್ ದಾಳಿಗಳಲ್ಲಿ ಭಾಗಿಯಾಗಿದ್ದ ಎಲ್ಲಾ ಪ್ರಮುಖ ಭಯೋತ್ಪಾದಕರನ್ನು ಯಶಸ್ವಿಯಾಗಿ ಮಟ್ಟಹಾಕುವ ಮೂಲಕ ಭಾರತೀಯ ಭದ್ರತಾ ಪಡೆಗಳು ಭಾರತದ ಮೇಲಿನ ದಾಳಿಗೆ ಸೂಕ್ತ ತಿರುಗೇಟು ನೀಡಿವೆ.

## ಕನ್ನಡ ಮಾತೃಭಾಷೆಯಾದರೆ, ತುಳು ಅದರ ಮಗಳು–ಸಿಎಂ



**ಬೆಂಗಳೂರು:** "ಕನ್ನಡ ಮಾತೃಭಾಷೆಯಾದರೆ, ತುಳು ಅದರ ಮಗಳು. ಭಾಷೆ ಉಳಿದರೆ ಸಂಸ್ಕೃತಿ ಉಳಿಯುತ್ತದೆ, ತುಳು ಉಳಿದರೆ ಮಾತ್ರ ತುಳುನಾಡಿನ ಪರಂಪರೆ ಉಳಿಯಲು ಸಾಧ್ಯ" ಎಂದು ಮುಖ್ಯ ಮಂತ್ರಿ ಡಿ. ಕೆ. ಶಿವಕುಮಾರ್ ಅಭಿಪ್ರಾಯ ಪಟ್ಟಿದ್ದಾರೆ. ಬೆಂಗಳೂರಿನ ವಿಜಯನಗರದಲ್ಲಿ ತುಳುನಾಡ ಜವನೆರ್ ಸಂಘಟನೆ ವತಿಯಿಂದ ಆಯೋಜಿಸಲಾಗಿದ್ದ 'ಅಷ್ಟಮಿದ ಐಸಿರಿ' ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ, ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ಮಳೆಯ ಪ್ರಮಾಣ **3ನೇ ಪುಟಕ್ಕೆ**

## ದೇವರ ಜಾಗ ಒಳಗೆ ಹಾಕಿದವರಿಂದಲೇ ಪ್ರತಿಭಟನೆ –ಅಶೋಕ್ ರೈ

**ಪುತ್ತೂರು:** ಮಹಾಲಿಂಗೇಶ್ವರ ದೇವಸ್ಥಾನದ ಜಾಗ ಒಳಗೆ ಹಾಕಿದವರು ಮತ್ತು ದೇವಸ್ಥಾನಕ್ಕಾಗಿ ಒಂದು ರೂಪಾಯಿ ಕೊಡದವರು ಇಂದು, ದೇವಸ್ಥಾನದಲ್ಲಿ ಅಕ್ರಮ ಆಗಿದೆ ಎಂದು ಹೇಳಿಕೊಂಡು ಪ್ರತಿಭಟನೆ ಮಾಡಿದ್ದಾರೆ. ಇಂಥವರಿಗೆ ಏನು ಹೇಳಬೇಕು, ಎಂಥಾ ಕಾಲ ಬಂತು ಎಂದು ಶಾಸಕ ಅಶೋಕ್ ರೈ ಬೇಸರ ವ್ಯಕ್ತಪಡಿಸಿದ್ದಾರೆ. ಪುತ್ತೂರಿನಲ್ಲಿ ಬಿಜೆಪಿ ದೇವಸ್ಥಾನ ವಿಚಾರದಲ್ಲಿ ನಡೆಸಿದ ಪ್ರತಿಭಟನೆಗೆ ಪ್ರತಿಕ್ರಿಯೆ ನೀಡಿದ ಅವರು, ದೇವಳದ ಜಾಗ ಒಳಗೆ ಹಾಕಿದವರು, ದೇವಸ್ಥಾನಕ್ಕಾಗಿ ಒಂದು ರೂಪಾಯಿ ಕೊಡದವರು ಎಲ್ಲ ಸೇರಿಕೊಂಡು ಪ್ರತಿಭಟನೆ ಮಾಡುತ್ತಿದ್ದಾರೆ. 60 ಕೋಟಿ ರೂ. ವೆಚ್ಚದಲ್ಲಿ ದೇವಸ್ಥಾನದ ಅಭಿವೃದ್ಧಿ **3ನೇ ಪುಟಕ್ಕೆ**



## ಕೃತಕ ಬುದ್ಧಿಮತ್ತೆಯಿಂದ ಅಪಾಯ –ಪ್ರೊ. ವಿವೇಕ ರೈ

**ಮಂಗಳೂರು:** ಜನ್ನನ ಯಶೋಧರ ಚರಿತೆಯಲ್ಲಿ ಬರುವ ಕೃತಕವಾಗಿ 'ಮಾಡಿದ ಕೋಳಿ'ಯಿಂದಾಗಿ ಯಶೋಧರ ಜನ್ಮಾಂತರದಲ್ಲಿ 'ಗೂಡಿನ ಕೋಳಿ'ಯಾಗಿ ಸಂಕಟ ಪಡುವ ಪ್ರಸಂಗ ಬರುತ್ತದೆ. ಯಾವತ್ತೂ ಕೃತಕ ಬುದ್ಧಿಯ ಪ್ರತಿಫಲ ಸಂಕಟವೇ ಆಗಿದೆ. ಆದ್ದರಿಂದ ಕೃತಕ ಬುದ್ಧಿಮತ್ತೆಯನ್ನು ಎಚ್ಚರದಿಂದ ಬಳಸಿ ಎಂದು ವಿದ್ವಾಂಸರಾದ ಪ್ರೊ. ಬಿ.ಎ. ವಿವೇಕ ರೈ ಹೇಳಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ದಕ್ಷಿಣ ಕನ್ನಡ ಮತ್ತು ಮೈಸೂರು ವಿಭಾಗ ಹಾಗೂ ಎಸ್‌ವಿಪಿ **3ನೇ ಪುಟಕ್ಕೆ**









## ದೇವರಜಾಗ ಒಳಗೆ ಹಾಕಿದವರಿಂದಲೇ ಪ್ರತಿಭಟನೆ – ಅಶೋಕ್‌ರೈ

ಒಂದನೇ ಪುಟದಿಂದ......

ಮಾಡುತ್ತಿರುವವರು ನಾವು ಸ್ವಾಮಿ. ನಾನು ನನ್ನ ಶಾಸಕ ನಿಧಿಯಿಂದಲೂ 10 ಕೋಟಿ ನೀಡಿದ್ದೇನೆ. ಮುಖ್ಯಮಂತ್ರಿಗಳು ಮಂಗಳೂರಿನಲ್ಲಿ ನಡೆಸಿದ ಕ್ಯಾಬಿನೆಟ್‌ನಲ್ಲಿ ಇನ್ನೂ 5 ಕೋಟಿರೂ. ಪುತ್ತೂರು ದೇವಳಕ್ಕೆ ಮಂಜೂರು ಮಾಡಿಸಿದ್ದೇನೆ. ನಾನು ವೈಯಕ್ತಿಕವಾಗಿ ನನ್ನ ದುಡಿದ ಹಣದಿಂದ 1 ಕೋಟಿರೂ. ದೇಣಿಗೆ ದೇವಸ್ಥಾನಕ್ಕೆ ನೀಡುತ್ತಿದ್ದೇನೆ. ನನ್ನ ಸಂಪಾದನೆಯ ದುಡ್ಡಿನಿಂದ 50 ಗ್ರಾಂ ಚಿನ್ನ ಕೊಡುವುದಾಗಿ ಹೇಳಿದ್ದೆ ಆ ಬಳಿಕ 100 ಗ್ರಾಂಚಿನ್ನ ದೇವಳಕ್ಕೆ ನೀಡಿದ್ದೇನೆ. ಅಲ್ಲಿ ಅಕ್ರಮ ಮಾಡಬೇಕಿದ್ದರೆ ನಾನು ಇಷ್ಟೊಂದು ದುಡ್ಡು ಕಿಸೆಯಿಂದ ನೀಡಬೇಕಿತ್ತಾ? ದುಡ್ಡು ಒಳಗೆ ಹಾಕುತ್ತಾ ಕೂರಬಹುದಿತ್ತಲ್ಲ ಎಂದು ಪ್ರಶ್ನಿಸಿದರು. ಪುತ್ತೂರು ದೇವಸ್ಥಾನಕ್ಕೆ ಸೇರಿದ 18 ಎಕರೆ ಜಾಗವನ್ನು ನಾವು ಬಿಡಿಸಿದ್ದು ಸ್ವಾಮಿ. ಮೊದಲು ಇದ್ದವರಿಗೆ ಇದೆಲ್ಲ ಯಾಕೆ ಆಗಲಿಲ್ಲ? ಯಾಕೆ ಇವರಿಗೆ ಧಮ್ಮಿರಲಿಲ್ವಾ? ಇದಕ್ಕೆಲ್ಲ ಅಶೋಕ್‌ರೈ ಬರಬೇಕಾಯಿತಾ? ನಾನು ಕೆರಳುವುದಿಲ್ಲ ಎಂದು ಕೊಂಡಿದ್ದೆ. ಆದರೆ ನಾನು ಕೆರಳಿದರೆ ಎಲ್ಲ ವಾಂತಿ ಮಾಡಿ ಬಿಡುತ್ತೇನೆ. ಇನ್ನು ಬಿಡುವುದಿಲ್ಲ. ಯಾರೆಲ್ಲ, ಎಲ್ಲೆಲ್ಲ ದೇವಸ್ಥಾನಗಳ ಜಾಗ ಒಳಗೆ ಹಾಕಿಕೊಂಡಿದ್ದಾರಾಅದನ್ನೆಲ್ಲ ಬಿಡಿಸಿಕೊಳ್ಳುತ್ತೇವೆ ಎಂದರು.

## ಕೃತಕ ಬುದ್ಧಿಮತ್ತೆಯಿಂದ ಅಪಾಯ– ಪ್ರೊ. ವಿವೇಕ ರೈ

ಒಂದನೇ ಪುಟದಿಂದ......

ಕನ್ನಡ ಅಧ್ಯಯನ ಸಂಸ್ಥೆ ಮಂಗಳೂರು ವಿವಿ ಇದರ ಆಶ್ರಯದಲ್ಲಿ ಮಂಗಳೂರು ವಿವಿ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಪ್ರೊ.ಬಿ.ಎ.ವಿವೇಕ ರೈ ವಿಚಾರ ವೇದಿಕೆಯಲ್ಲಿ ಎರಡು ದಿನಗಳ ಕಾಲ ಹಮ್ಮಿಕೊಳ್ಳಲಾಗಿರುವ "ಹಳಗನ್ನಡ ಓದು ಮತ್ತು ವ್ಯಾಖ್ಯಾನ" ರಾಷ್ಟ್ರೀಯ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಓದುವಿಕೆ ಬಹಳ ಸಂಕೀರ್ಣವಾದ ಹಾಗೂ ಸಾಂಸ್ಕೃತಿಕವಾದ ವಿಮರ್ಶೆಯ ಪರಿಕಲ್ಪನೆಯಾಗಿದೆ. ಸಮಾಜ ಮತ್ತು ಓದುವಿಕೆಗೆ ಆಳವಾದ ಸಂಬಂಧವಿದೆ. ಹಳಗನ್ನಡವು ಕನ್ನಡದ ಭಾಷೆಯನ್ನುಕಟ್ಟಿಕೊಡುತ್ತದೆ. ಆದ್ದರಿಂದ ಹಳಗನ್ನಡದ ಮಹತ್ವವನ್ನು ಅರ್ಥೈಸಿಕೊಂಡು ಅದರ ಸಮಗ್ರ ಓದುವಿಕೆಯೆಡೆಗೆ ವಿದ್ಯಾರ್ಥಿಗಳು ಮತ್ತು ಯುವ ಸಮುದಾಯ ಮುಂದಾಗಬೇಕು ಎಂದು ಪ್ರೊ.ವಿವೇಕ ರೈ ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಂಗಳೂರು ವಿವಿ ಕುಲಪತಿ ಪ್ರೊ. ಪಿ.ಎಲ್. ಧರ್ಮ, ಜನಾಂಗದ ಬೆಳವಣಿಗೆಯಲ್ಲಿ ಭಾಷೆಯ ಪಾತ್ರ ಮಹತ್ತರವಾದುದು ಎಂದರು.

## ಕನ್ನಡ ಮಾತೃಭಾಷೆಯಾದರೆ, ತುಳು ಅದರ ಮಗಳು–ಸಿಎಂ

ಒಂದನೇ ಪುಟದಿಂದ......

ಹೆಚ್ಚಿರುವ ಕಾರಣ ಮೂಲ ಸೌಕರ್ಯಗಳ ನಿರ್ವಹಣಾ ವೆಚ್ಚವೂ ಹೆಚ್ಚಿದೆ. ಈ ಹಿನ್ನೆಲೆಯಲ್ಲಿ ಈ ಪ್ರದೇಶಗಳಲ್ಲಿ ಬಂಡವಾಳ ಹೂಡಿಕೆಯನ್ನು ಉತ್ತೇಜಿಸಲು ಹಾಗೂ ಹೂಡಿಕೆದಾರರಿಗೆ ನೆರವಾಗಲು ಬ್ಯಾಂಕ್ ಸಾಲ ತೀರುವಳಿ ಅವಧಿಯನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಿಎಂ ಘೋಷಿಸಿದರು. ದಕ್ಷಿಣ ಕನ್ನಡ ಜಿಲ್ಲೆಯು ಜ್ಞಾನ, ಉತ್ತಮ ಪರಿಸರ ಮತ್ತು ವಿಶಾಲವಾದ ಕಡಲ ತೀರವನ್ನು ಹೊಂದಿದ್ದು, ವ್ಯಾಪಾರ, ಶಿಕ್ಷಣ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದೆ ಎಂದರು. ಇದೇ ಮೊದಲ ಬಾರಿಗೆ ಮಂಗಳೂರಿನಲ್ಲಿ ಸಚಿವ ಸಂಪುಟ ಸಭೆ ನಡೆಸಿ ಹಲವು ಐತಿಹಾಸಿಕ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ. ಸಂಪುಟದ ಎಲ್ಲಾ ನಿರ್ಣಯಗಳಿಗೆ ಈಗಾಗಲೇ ಸಹಿ ಹಾಕಲಾಗಿದ್ದು, ಸದ್ಯದಲ್ಲೇ ಅಧಿಕೃತ ಸರ್ಕಾರಿ ಆದೇಶಗಳನ್ನು ಹೊರಡಿಸಿ ಎಲ್ಲಾ ಘೋಷಣೆಗಳನ್ನು ಜಾರಿಗೊಳಿಸಲಾಗುವುದು ಎಂದು ಅವರು ತಿಳಿಸಿದರು. ಹೊಸ ಪ್ರವಾಸೋದ್ಯಮ ನೀತಿಗೆ ಅನುಮೋದನೆ ನೀಡಲಾಗಿದೆ ಎಂದು ಅವರು ಹೇಳಿದರು.

## ಕರ್ನಾಟಕದ ಭಾರತ್‌ಗ್ಯಾಸ್ ಬಾಟ್ಲಿಂಗ್ ಘಟಕಗಳಲ್ಲಿ ಕಾನೂನು ಮಾಪನಶಾಸ್ತ್ರ ತಪಾಸಣೆ: ಬಿಪಿಸಿಎಲ್ ಸ್ಪಷ್ಟನೆ




ಮಂಗಳೂರು: ಕರ್ನಾಟಕದಲ್ಲಿರುವ ತನ್ನ ನಾಲ್ಕು ಭಾರತ್‌ಗ್ಯಾಸ್ ಎಲ್‌ಪಿಜಿ ಬಾಟ್ಲಿಂಗ್ ಘಟಕಗಳಲ್ಲಿ ಇತ್ತೀಚೆಗೆ ಕಾನೂನು ಮಾಪನಶಾಸ್ತ್ರ ಇಲಾಖೆ ನಡೆಸಿರುವ ಪರಿಶೀಲನಾ ಪ್ರಕ್ರಿಯೆಯ ಕುರಿತು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಅಧಿಕೃತ ಸ್ಪಷ್ಟನೆ ನೀಡಿದೆ. ರಾಜ್ಯದ ಬೆಂಗಳೂರು, ಮಂಗಳೂರು, ಧಾರವಾಡ ಹಾಗೂ ಕಲಬುರಗಿಯಲ್ಲಿರುವ ಪ್ರಮುಖ ಬಾಟ್ಲಿಂಗ್ ಘಟಕಗಳಲ್ಲಿ ಈ ತಪಾಸಣೆ ಕೈಗೊಳ್ಳಲಾಗಿದೆ. ಅಧಿಕಾರಿಗಳು ನಡೆಸಿದ ಸಮಗ್ರ ಪರಿಶೀಲನೆಯಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಭರ್ತಿ ಪ್ರಕ್ರಿಯೆಯ ನಿಖರತೆ ಮತ್ತು ತೂಕವನ್ನು ಪರೀಕ್ಷಿಸಲಾಯಿತು. ಈ ವೇಳೆ, ತಪಾಸನೆಗೆ ಒಳಪಟ್ಟ ಎಲ್ಲಾ ಸಿಲಿಂಡರ್‌ಗಳ ತೂಕವು ಸರಕಾರ ಹಾಗೂ ಸಂಬಂಧಿತ ಅಧಿಕಾರಿಗಳು ನಿಗದಿಪಡಿಸಿರುವ ಅನುಮತಿಸುವ ಮಿತಿಯ ವ್ಯಾಪ್ತಿಯಲ್ಲೇ ಇರುವುದು ದೃಢಪಟ್ಟಿದೆ ಎಂದು ಬಿಪಿಸಿಎಲ್ ತಿಳಿಸಿದೆ. ಗ್ರಾಹಕರ ಕೈ ತಲುಪುವ ಪ್ರತಿಯೊಂದು ಸಿಲಿಂಡರ್ ಅತ್ಯಂತ ಸುರಕ್ಷಿತ ಹಾಗೂ ನಿಖರವಾದ ತೂಕವನ್ನು ಹೊಂದಿದೆ ಎಂಬುದನ್ನು ಇದು ಸಾಬೀತುಪಡಿಸಿದೆ. ಈ ಕಾರ್ಯವಿಧಾನಗಳು ಭಾರತ್‌ಗ್ಯಾಸ್‌ನ ಹೆಮ್ಮೆಯ 'ಝೀರೋ ಕಾದಮ್' ಉಪಕ್ರಮದ ಭಾಗವಾಗಿದ್ದು, ಗ್ರಾಹಕರಿಗೆ ನಿಖರ ಪ್ರಮಾಣದ ಗ್ಯಾಸ್ ಪೂರೈಕೆ, ಶ್ರೇಷ್ಠ ಗುಣಮಟ್ಟ ಮತ್ತು ಗರಿಷ್ಠ ಸುರಕ್ಷತೆಯನ್ನು ಒದಗಿಸುವ ಬದ್ಧತೆಯನ್ನು ಇದು ಮತ್ತಷ್ಟು ಬಲಪಡಿಸಿದೆ. ಸಾರ್ವಜನಿಕರಿಗೆ ಭರವಸೆ ನೀಡಲು ಕಂಪನಿಯು ಎಲ್ಲಾ ಘಟಕಗಳಲ್ಲಿ ಕಠಿಣ ಗುಣಮಟ್ಟ ಮತ್ತು ಕಾರ್ಯಾಚರಣೆಯ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದು, ಮುಂಬರುವ ದಿನಗಳಲ್ಲೂ ಇಂತಹ ಪಾರದರ್ಶಕ ಪರಿಶೀಲನೆಗಳನ್ನು ಮುಂದುವರಿಸುವುದಾಗಿ ಸ್ಪಷ್ಟಪಡಿಸಿದೆ.

## ಮಹಿಳಾ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಮಂಗಳೂರು – 2026-27ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಧನಶ್ರೀ ಯೋಜನೆ, ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ, ಚೇತನ ಯೋಜನೆ ಹಾಗೂ ಉದ್ಯೋಗಿನಿ ಯೋಜನೆಗಳಿಗೆ ಸೇವಾ ಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ:- 0824-2451254, 9480155501 ಸಂಪರ್ಕಿಸಬಹುದು.

## ಜೈನ್ ಅರ್ಚಕರು, ಸಿಖ್ ಗ್ರಂಥಿಗಳಿಗೆ ಗೌರವಧನ– ಅರ್ಜಿ ಆಹ್ವಾನ

ಮಂಗಳೂರು–ಜೈನ್ ಸಮುದಾಯದ ಬಸದಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಧಾನ ಮತ್ತು ಸಹಾಯಕ ಅರ್ಚಕರುಗಳಿಗೆ ಹಾಗೂ ಸಿಖ್ ಗುರುದ್ವಾರಗಳಲ್ಲಿರುವ ಮುಖ್ಯ ಮತ್ತು ಸಹಾಯಕ ಗ್ರಂಥಿಗಳಿಗೆ ಮಾಸಿಕ ಗೌರವ ಧನ ನೀಡಲು ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆ ಮತ್ತು ಇತರೆ ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಛೇರಿಯನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## ದೇವಾಲಯಗಳ ವ್ಯವಸ್ಥಾಪನಾ ಸಮಿತಿ ರಚನೆಗೆ ಅರ್ಜಿ ಆಹ್ವಾನ

ಶಿವಮೊಗ್ಗ : ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಕಾಯ್ದೆ ಅಧಿನಿಯಮ 1997 ರ ಕಲಂ 25 ರನ್ವಯ ಜಿಲ್ಲೆಯ "ಬಿ" ಮತ್ತು 'ಸಿ' ಪ್ರವರ್ಗ ಮುಜರಾಯಿ ದೇವಾಲಯಗಳ ವ್ಯವಸ್ಥಾಪನಾ ಸಮಿತಿಯನ್ನು ಮುಂದಿನ 3 ವರ್ಷಗಳ ಅವಧಿಗೆ ರಚಿಸಲು ಆಸಕ್ತ ಭಕ್ತಾಧಿಗಳು, ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅ.28 ರಂದು ಕೊನೆಯ ದಿನವಾಗಿದ್ದು, ಎಲ್ಲಾ ತಾಲ್ಲೂಕು ತಹಶೀಲ್ದಾರ್ ಕಚೇರಿಗಳಲ್ಲಿ ಅರ್ಜಿ ಲಭ್ಯವಿದ್ದು, ಭರ್ತಿ ಮಾಡಿದ ಅರ್ಜಿಗಳನ್ನು ನೇರವಾಗಿ ತಾಲ್ಲೂಕು ಕಚೇರಿಗೆ ಸಲ್ಲಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಲಾವಿದರು/ತಂತ್ರಜ್ಞರಿಂದ ಅರ್ಜಿ ಆಹ್ವಾನ

ಶಿವಮೊಗ್ಗ : ಶಿವಮೊಗ್ಗದ ರಂಗಾಯಣದಲ್ಲಿ ರೆಪರ್ಟರಿಗೆ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇಬ್ಬರು ಮಹಿಳಾ ಕಲಾವಿದರು, ಮತ್ತು ಇಬ್ಬರು ಪುರುಷ ಕಲಾವಿದರನ್ನು ಹಾಗೂ ಒಬ್ಬ ಸಂಗೀತ ಸಂಯೋಜಕರು/ಪಕ್ಕವಾದ್ಯಗಾರರನ್ನು ನೇಮಕ ಮಾಡಿಕೊಳ್ಳಲು ಆಸಕ್ತರಿಂದ ಅರ್ಜಿಯನ್ನು ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ 08182-256353 ಅಥವಾ ಮೊಬೈಲ್ ಸಂಖ್ಯೆ : 7975229166 ಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

## ಮಹಿಳಾ ಅಭಿವೃದ್ಧಿ ನಿಗಮ : ಅರ್ಜಿ ಆಹ್ವಾನ

ಮಡಿಕೇರಿ – 2026-27ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಯೋಜನೆಗಳಾದ ಉದ್ಯೋಗಿನಿ ಯೋಜನೆ, ಧನಶ್ರೀ ಯೋಜನೆ, ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ, ಚೇತನ ಯೋಜನೆಗಳಿಗೆ ಸೇವಾ ಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ.08272-228010, 9482194105ನ್ನು ಸಂಪರ್ಕಿಸಬಹುದು

## ನೋಡಲ್ ಅಧಿಕಾರಿಗಳ ನೇಮಕ : ಸಚಿವ ಯು. ಟಿ. ಖಾದರ್



ಮಂಗಳೂರು : ಮಂಗಳೂರಿನಲ್ಲಿ ಸೆಪ್ಟೆಂಬರ್ 18 ರಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯ ನಿರ್ಣಯಗಳನ್ನು ತ್ವರಿತವಾಗಿ ಜಾರಿಗೆ ತರಲು ಪ್ರತಿಯೊಂದು ಇಲಾಖೆಯಲ್ಲೂ ನೋಡಲ್ ಅಧಿಕಾರಿಗಳನ್ನು ನೇಮಿಸಬೇಕು ಎಂದು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಯು.ಟಿ. ಖಾದರ್ ಸೂಚಿಸಿದ್ದಾರೆ. ಸೋಮವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಧಿಕಾರಿಗಳ ಜೊತೆ ನಡೆಸಿದ ಸಭೆಯಲ್ಲಿ ಮಾತನಾಡಿದ ಅವರು, ಸಂಪುಟ ನಿರ್ಧಾರಗಳು ಶೀಘ್ರವಾಗಿ ಸರ್ಕಾರದ ಆದೇಶ ವಾಗಿ ಹೊರಬರಲು ಇಲಾಖೆಗಳು ಸಚಿವಾಲಯದೊಂದಿಗೆ ನಿರಂತರ ಸಮನ್ವಯ ಕಾಯ್ದುಕೊಳ್ಳಬೇಕು ಎಂದರು. ಸರ್ಕಾರದ ಆದೇಶ ಬಂದ ತಕ್ಷಣವೇ ಕ್ರಿಯಾಯೋಜನೆ ಸಿದ್ಧಪಡಿಸಿ ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡಬೇಕು ಹಾಗೂ ಯೋಜನೆಗಳ ಬಗ್ಗೆ ಅಧಿಕಾರಿಗಳು ಸ್ಪಷ್ಟ ಮಾಹಿತಿ ಹೊಂದಿರಬೇಕು. ಸದ್ಯದಲ್ಲೇ ಮುಖ್ಯಮಂತ್ರಿಗಳು ಕಾಮಗಾರಿಗಳ ಪರಿಶೀಲನೆಗೆ ಆಗಮಿಸಲಿದ್ದಾರೆ ಎಂದು ಸಚಿವರು ತಿಳಿಸಿದರು. ಕುದ್ರು ದ್ವೀಪಗಳ ಅಭಿವೃದ್ಧಿ ಪಿಪಿಪಿ ಮಾದರಿಯಲ್ಲಿ ನಡೆಯಲಿದ್ದು, ಸಿ.ಆರ್.ಜೆಡ್ ಅನುಮೋದನೆ ಪಡೆದು ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದರು.

## ಸಾಂವಿಧಾನಿಕ ಸಂಸ್ಥೆಗಳ ತೇಜೋವಧೆ ಪ್ರಜಾಪ್ರಭುತ್ವಕ್ಕೆ ಕಂಟಕ : ಸಂಸದ ಕ್ಯಾ. ಬ್ರಿಜೇಶ್ ಚೌಟ



ನವದೆಹಲಿ: ಸಾಲು ಸಾಲು ಚುನಾವಣಾ ಸೋಲುಗಳನ್ನು ಜೀರ್ಣಿಸಿಕೊಳ್ಳಲಾಗದೇ ಚುನಾವಣಾ ಆಯೋಗ ಸೇರಿದಂತೆ ದೇಶದ ಸಾಂವಿಧಾನಿಕ ಸಂಸ್ಥೆಗಳನ್ನು ತೇಜೋವಧೆ ಮಾಡುವುದನ್ನೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ರಾಜಕೀಯ ಅಸ್ತ್ರವನ್ನಾಗಿ ಮಾಡಿಕೊಂಡಿದ್ದು, ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ತೀವ್ರ ಧಕ್ಕೆ ತರಲಿದೆ ಎಂದು ದ.ಕ. ಸಂಸದ ಕ್ಯಾ.ಬ್ರಿಜೇಶ್ ಚೌಟ ವಾಗ್ದಾಳಿ ನಡೆಸಿದ್ದಾರೆ. ಚುನಾವಣಾ ಆಯೋಗ ನೀಡಿರುವ ಇತ್ತೀಚಿನ ಸ್ಪಷ್ಟನೆಯು ಕಾಂಗ್ರೆಸ್ ಪಕ್ಷದ ಪಿತೂರಿಯನ್ನು ಮತ್ತು ರಾಹುಲ್ ಗಾಂಧಿಯವರ ಬೇಜವಾಬ್ದಾರಿ ಧೋರಣೆಯನ್ನು ದೇಶದ ಮುಂದೆ ಮತ್ತೊಮ್ಮೆ ಬೆತ್ತಲೆಗೊಳಿಸಿದೆ ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಾಂಗ್ರೆಸ್ ಪಕ್ಷವು ಕರ್ನಾಟಕ, ಕೇರಳ, ತೆಲಂಗಾಣ ಹಾಗೂ ಹಿಮಾಚಲ ಪ್ರದೇಶಗಳಲ್ಲಿ ಗೆದ್ದಾಗ ಚುನಾವಣಾ ಆಯೋಗ ಮತ್ತು ಇವಿಎಂ ಸರಿಯಾಗಿರುತ್ತವೆ; ಆದರೆ ಉಳಿದೆಡೆ ಸೋತಾಗ ಸಾಂವಿಧಾನಿಕ ಸಂಸ್ಥೆಗಳ ಮೇಲೆ ಗೂಬೆ ಕೂರಿಸುವುದು ಅವರ ರಾಜಕೀಯ ತಂತ್ರಗಾರಿಕೆಯಾಗಿದೆ ಎಂದು ಚೌಟ ಆರೋಪಿಸಿದ್ದಾರೆ. ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆ ಪ್ರಕ್ರಿಯೆಯ ಸುತ್ತ ಎಬ್ಬಿಸಲಾದ ವಿವಾದವನ್ನು 'ಸಾಂವಿಧಾನಿಕ ಬಿಕ್ಕಟ್ಟು' ಎಂದು ಬಿಂಬಿಸಲು ಯತ್ನಿಸಲಾಗಿತ್ತು ಎಂದರು.

## ಕಳಿಯಾಟ ಮಹೋತ್ಸವ ಪುಣ್ಯದ ಕಾರ್ಯ–ವೇದವ್ಯಾಸ ಕಾಮತ್



ಮಂಗಳೂರು: ಪುರಾಣ ಪ್ರಸಿದ್ದ ಕುದ್ರೋಳಿ ಶ್ರೀ ಭಗವತೀ ಕ್ಷೇತ್ರದಲ್ಲಿ 75 ವರ್ಷಗಳ ಬಳಿಕ ಮುಂದಿನ ವರ್ಷ ನಡೆಯಲಿರುವ ಸಂಭ್ರಮದ ಕಳಿಯಾಟ ಮಹೋತ್ಸವದ ಪುಣ್ಯಕಾರ್ಯಕ್ಕೆ ನಮ್ಮನ್ನು ಸಮರ್ಪಿಸಿಕೊಳ್ಳುವ ಮೂಲಕ ಧನ್ಯರಾಗೋಣ ಎಂದು ಶಾಸಕ ವೇದವ್ಯಾಸ ಕಾಮತ್ ಹೇಳಿದರು. ಕೊಡಿಯಾಲ್ ಬೈಲ್ ಕುದ್ರೋಳಿ ಶ್ರೀ ಭಗವತೀ ಕ್ಷೇತ್ರದಲ್ಲಿ 2027 ರಲ್ಲಿ ನಡೆಯಲಿರುವ ಕಳಿಯಾಟ ಮಹೋತ್ಸವದ ಹಿನ್ನೆಲೆಯಲ್ಲಿ ರವಿವಾರ ಕೂಟಕ್ಕಳ ಸಭಾಂಗಣದಲ್ಲಿ ನಡೆದ ಸಮಿತಿ ರಚನಾ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿದರು. ಕಳಿಯಾಟ ಮಹೋತ್ಸವವು ವಿವಿಧ ಧಾರ್ಮಿಕ ಕಾರ್ಯಗಳ ಮೂಲಕ ನಡೆಯಲಿದ್ದು, ಇಂತಹ ಅಪೂರ್ವ ಧಾರ್ಮಿಕ ಕಾರ್ಯಕ್ರಮವನ್ನು ಕಣ್ತುಂಬಿಕೊಳ್ಳುವ ಯೋಗ ನಮ್ಮದಾಗಲಿದೆ. ಮಹೋತ್ಸವದ ಯಶಸ್ಸಿಗೆ ಎಲ್ಲರೂ ಸಹಕರಿಸಬೇಕು ಎಂದು ಅವರು ಹೇಳಿದರು.

## ಕ್ರೀಡಾಂಗಣ ನಿರ್ಮಾಣ : ಮುಡಾ ಹಾಗೂ KSCAಯಿಂದ ಮಹತ್ವದ ಹೆಜ್ಜೆ !



ಮಂಗಳೂರು: ನಗರದಲ್ಲಿ ಸುಸಜ್ಜಿತ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸುವ ನಿಟ್ಟಿನಲ್ಲಿ ಕರಾವಳಿ ಭಾಗದ ಕ್ರಿಕೆಟ್ ಕ್ರೀಡಾಪಟುಗಳು ಮತ್ತು ಅಭಿಮಾನಿಗಳ ಬಹುದಿನಗಳ ಕನಸಿಗೆ ಜೀವ ತುಂಬುವ ಮಹತ್ವದ ಹೆಜ್ಜೆಯೊಂದು ಮೂಡಿದೆ. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಧ್ಯಕ್ಷರಾದ ಶ್ರೀ ಸಂತೋಷ್ ಕುಮಾರ್ ಶೆಟ್ಟಿಯವರು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (KSCA) ಅಧ್ಯಕ್ಷರಾದ ಮಾಜಿ ಭಾರತೀಯ ಕ್ರಿಕೆಟಿಗ ಶ್ರೀ ವೆಂಕಟೇಶ್ ಪ್ರಸಾದ್ ಹಾಗೂ ಸಂಘಟನೆಯ ಪದಾಧಿಕಾರಿಗಳನ್ನು ಭೇಟಿ ಮಾಡಿ ಈ ಕುರಿತು ಅತ್ಯಂತ ಗಂಭೀರ ಹಾಗೂ ಸಕಾರಾತ್ಮಕ ಚರ್ಚೆ ನಡೆಸಿದ್ದಾರೆ. ಮಂಗಳೂರಿನಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಿಸಲು KSCA ಸಂಪೂರ್ಣ ಆಸಕ್ತಿ ವ್ಯಕ್ತಪಡಿಸಿದೆ. ಈ ಯೋಜನೆಯ ಪ್ರಮುಖ ಭಾಗವಾಗಿ ಸೂಕ್ತವಾದ ಸ್ಥಳವನ್ನು ಅಂತಿಮಗೊಳಿಸಲು ಅತಿ ಶೀಘ್ರದಲ್ಲೇ ಮಂಗಳೂರಿಗೆ ಖುದ್ದು ಭೇಟಿ ನೀಡುವುದಾಗಿ ಶ್ರೀ ವೆಂಕಟೇಶ್ ಪ್ರಸಾದ್ ತಿಳಿಸಿದ್ದಾರೆ. ಅಲ್ಲದೆ, ಮಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಯು.ಟಿ. ಖಾದರ್ ಅವರೊಂದಿಗೆ ಸಮಾಲೋಚನೆ ನಡೆಸಿ, ಈ ಬೃಹತ್ ಯೋಜನೆಯ ಮುಂದಿನ ಹಂತದ ರೂಪುರೇಷೆಗಳ ಬಗ್ಗೆ ಚರ್ಚಿಸುವುದಾಗಿಯೂ ಅವರು ಸ್ಪಷ್ಟಪಡಿಸಿದ್ದಾರೆ.

## ರಾಜ್ಯದ ಸಾಲ 8.25 ಲಕ್ಷ ಕೋಟಿಗೆ ಏರಿಕೆ – ಶಾಸಕ ಕಾಮತ್



ಮಂಗಳೂರು:ಕರಾವಳಿ ಜನರ ಕಣ್ಣಿಗೆ ಮಣ್ಣೆರಚಿ ಆರ್ಥಿಕವಾಗಿ ದಿವಾಳಿಯಾಗಿರುವ ರಾಜ್ಯ ಸರ್ಕಾರವು ಮಂಗಳೂರಿನಲ್ಲಿ ನಡೆದ ಸಚಿವ ಸಂಪುಟ ಸಭೆಯ ಮೂಲಕ 'ಅಂಗೈಯಲ್ಲಿ ಆಕಾಶ ತೋರಿಸುವ' ಕೆಲಸ ಮಾಡಿದೆ ಎಂದು ಮಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ವೇದವ್ಯಾಸ ಕಾಮತ್ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಮಂಗಳೂರಿನಲ್ಲಿ ಸಚಿವ ಸಂಪುಟ ಸಭೆ ನಡೆಯುವ ಹಿಂದಿನ ದಿನವೇ ಅಂದರೆ ಸೆಪ್ಟೆಂಬರ್ 17ರಂದು ಹಣಕಾಸು ಇಲಾಖೆಯು ಅಧಿಕೃತ ಪತ್ರ ಬರೆದು ರಾಜ್ಯದ ದಯನೀಯ ಆರ್ಥಿಕ ಸ್ಥಿತಿಯನ್ನು ಬಿಚ್ಚಿಟ್ಟಿತ್ತು. ಈಗಾಗಲೇ ಬಜೆಟ್‌ನಲ್ಲಿ ಘೋಷಿಸಿದ ಕಾಮಗಾರಿಗಳಿಗೇ ಹಣವಿಲ್ಲದೇ 2 ಲಕ್ಷ ಕೋಟಿ ರೂಪಾಯಿಗೂ ಹೆಚ್ಚಿನ ಕಾಮಗಾರಿಗಳು ಬಾಕಿ ಉಳಿದಿವೆ. ಪಿಡಬ್ಲ್ಯೂಡಿ, ನಗರಾಭಿವೃದ್ಧಿ, ಜಲಸಂಪನ್ಮೂಲ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಗುತ್ತಿಗೆದಾರರಿಗೆ ಸುಮಾರು 36,000 ಕೋಟಿ ರೂಪಾಯಿ ಬಾಕಿ ಪಾವತಿಸಬೇಕಿದೆ. ಹೊಸ ಘೋಷಣೆಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿಗಳ ಅಧೀನದಲ್ಲೇ ಇರುವ ಹಣಕಾಸು ಇಲಾಖೆ ಸ್ಪಷ್ಟಪಡಿಸಿದ್ದರೂ, ಸಂಪುಟ ಸಭೆಯಲ್ಲಿ 30ರಿಂದ 32ಸಾವಿರ ಕೋಟಿ ರೂ. ಅನುದಾನದ ನಿರ್ಣಯ ಕೈಗೊಂಡು ಜನರನ್ನು ಮರುಳು ಮಾಡಲಾಗಿದೆ.

## ಎಂಆರ್‌ಪಿಎಲ್‌ನಲ್ಲಿ ಸ್ಫೋಟ ಹಿನ್ನೆಲೆ ತುರ್ತು ಸುರಕ್ಷತಾ ಕ್ರಮ



ಮಂಗಳೂರು: ಮಂಗಳೂರಿನ ಎಂಆರ್‌ಪಿಎಲ್ (MRPL) ತೈಲ ಸಂಸ್ಕರಣಾ ಘಟಕದಲ್ಲಿ ಸಂಭವಿಸಿದ ಸ್ಫೋಟದ ಹಿನ್ನೆಲೆಯಲ್ಲಿ ಅಧಿಕಾರಿಗಳಿಂದ ಸಂಪೂರ್ಣ ಮಾಹಿತಿಯನ್ನು ಪಡೆದುಕೊಳ್ಳಲಾಗಿದ್ದು, ಪರಿಸ್ಥಿತಿಯನ್ನು ಸಂಪೂರ್ಣವಾಗಿ ನಿಯಂತ್ರಣಕ್ಕೆ ತರುವ ಹಾಗೂ ಸುರಕ್ಷತಾ ಕಾರ್ಯಾಚರಣೆಯನ್ನು ಭರದಿಂದ ಸಾಗಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಘಟನೆ ಸಂಭವಿಸಿದ ತಕ್ಷಣದಿಂದಲೇ ಎಂ.ಆರ್.ಪಿ.ಎಲ್ ಅಧಿಕಾರಿಗಳು, ಪೊಲೀಸ್ ಆಯುಕ್ತರು, ಬಜ್ಪೆ ಪಟ್ಟಣ ಪಂಚಾಯತ್ ಹಾಗೂ ಅಗ್ನಿ ಶಾಮಕದಳದ ಉನ್ನತಾಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದುಸ್ಫೋಟದ ನಂತರದ ಸ್ಥಿತಿಗತಿಯನ್ನು ಸೂಕ್ಷ್ಮವಾಗಿ ಅವಲೋಕಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಯಾವುದೇ ರೀತಿಯ ತುರ್ತು ಪರಿಸ್ಥಿತಿಯನ್ನು ಎದುರಿಸುವ ನಿಟ್ಟಿನಲ್ಲಿ ಹಾಗೂ ಮುಂಜಾಗ್ರತಾ ಕ್ರಮವಾಗಿ ಸ್ಥಳೀಯ ಆಸ್ಪತ್ರೆಗಳಿಗೆ ಅಗತ್ಯ ಸಿದ್ಧತೆಗಳೊಂದಿಗೆ ಸಂಪೂರ್ಣ ಸನ್ನದ್ಧವಾಗಿರಲು ಸೂಚನೆ ನೀಡಲಾಗಿದೆ. ದುರಂತದ ಸ್ಥಳದಲ್ಲಿ ಅಗತ್ಯವಿರುವ ಎಲ್ಲಾ ರೀತಿಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಸಾರ್ವಜನಿಕರು ಯಾವುದೇ ರೀತಿಯ ಭೀತಿ ಅಥವಾ ಆತಂಕಕ್ಕೆ ಒಳಗಾಗಬಾರದು ಎಂದು ಕೋರಲಾಗಿದೆ.

## ಧರ್ಮಸ್ಥಳದಲ್ಲಿ 28ನೇ ವರ್ಷದ ಭಜನಾ ಕಮ್ಮಟ



ಧರ್ಮಸ್ಥಳ: ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ನಡೆಯುತ್ತಿರುವ 28ನೇ ವರ್ಷದ ಭಜನಾ ಕಮ್ಮಟದ ಮೊದಲನೇ ದಿನದ ಅಂಗವಾಗಿ ಶಿಬಿರಾರ್ಥಿಗಳಿಗೆ ಭಜನಾ ತರಬೇತಿ ಕಾರ್ಯಕ್ರಮ ನೆರವೇರಿತು. ಕಾರ್ಯಕ್ರಮದಲ್ಲಿ ಮಣಿಪಾಲದ ಸಂಗೀತ ವಿದುಷಿ ಶ್ರೀಮತಿ ಉಷಾ ಹೆಬ್ಬಾರ್ ಅವರು ಶಿಬಿರಾರ್ಥಿಗಳಿಗೆ ಭಜನೆಯ ಸ್ವರ, ಲಯ, ತಾಳ ಹಾಗೂ ಗಾಯನ ಕ್ರಮಗಳ ಕುರಿತು ಮಾರ್ಗದರ್ಶನ ನೀಡಿ, ಪ್ರಾಯೋಗಿಕ ತರಬೇತಿಯನ್ನು ನಡೆಸಿಕೊಟ್ಟರು. ಇದೇ ವೇಳೆ ಭಜನಾ ಕಮ್ಮಟದ ಸಂಚಾಲಕರಾದ ಶ್ರೀ ಸುಬ್ರಹ್ಮಣ್ಯ ಪ್ರಸಾದ್ ಹಾಗೂ ಕಾರ್ಯದರ್ಶಿ ಶ್ರೀ ವೀರು ಶೆಟ್ಟಿ ಅವರು ಶಿಬಿರಾರ್ಥಿಗಳಿಗೆ ಶ್ರೀ ಕ್ಷೇತ್ರ ಧರ್ಮಸ್ಥಳದ ಪರಿಚಯವನ್ನು ಮಾಡಿಕೊಟ್ಟರು. ಸಂಜೆ ಕಾರ್ಕಳದ ಸಾಲ್ಮರ ಶ್ರೀ ವೆಂಕಟರಮಣ ಭಜನಾ ಮಂಡಳಿಯ ಸದಸ್ಯರಿಂದ ಭಜನಾ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಶ್ರೀ ಡಿ. ಹರ್ಷೇಂದ್ರ ಕುಮಾರ್ ಹಾಗೂ ಶ್ರೀಮತಿ ಐಶ್ವರ್ಯ ನಿಶ್ಚಲ್ ಅವರು ಉಪಸ್ಥಿತರಿದ್ದರು.

## 'ದಕ್ಷಿಣ ಕನ್ನಡ' ಐತಿಹಾಸಿಕ ಹೆಸರನ್ನೇ ಉಳಿಸಲು ಮನವಿ!

SAVE DAKSHINA KANNADA FORUM
ದಕ್ಷಿಣ ಕನ್ನಡ
ದಕ್ಷಿಣ ಕನ್ನಡ ಉಳಿಸಿ ವೇದಿಕೆ

ಮಂಗಳೂರು: ದ. ಕನ್ನಡ ಜಿಲ್ಲೆಯ ಐತಿಹಾಸಿಕ ಹೆಸರನ್ನು ಬದಲಾಯಿಸಿ 'ಮಂಗಳೂರು ಜಿಲ್ಲೆ' ಎಂದು ಮರುನಾಮಕರಣ ಮಾಡುವ ಪ್ರಸ್ತಾಪಕ್ಕೆ ಸಂಬಂಧಿಸಿದಂತೆ, 'ದಕ್ಷಿಣ ಕನ್ನಡ' ಎಂಬ ಹೆಸರನ್ನೇ ಮುಂದುವರಿಸಬೇಕೆಂದು 'ದಕ್ಷಿಣ ಕನ್ನಡ ಉಳಿಸಿ ವೇದಿಕೆ' ಹಾಗೂ ಜಿಲ್ಲೆಯ ನಾಗರಿಕರು, ಬುದ್ಧಿಜೀವಿಗಳು, ಇತಿಹಾಸಕಾರರು ಮತ್ತು ಸಾಹಿತಿಗಳು ಕರ್ನಾಟಕ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಈ ಕುರಿತು ಮುಖ್ಯಮಂತ್ರಿಯವರಿಗೆ ಸಲ್ಲಿಸಿರುವ ಮನವಿಯಲ್ಲಿ ಈ ಬೇಡಿಕೆಯು ಮಂಗಳೂರಿನ ವಿರುದ್ಧವಾಗಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಮಂಗಳೂರು ಈ ಪ್ರದೇಶದ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಕೇಂದ್ರವಾಗಿದ್ದರೂ, 'ದಕ್ಷಿಣ ಕನ್ನಡ' ಎಂಬ ಹೆಸರು ಮಂಗಳೂರನ್ನು ಮೀರಿದ ವಿಶಾಲ ಭೌಗೋಳಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಪ್ರದೇಶ ವನ್ನು ಪ್ರತಿನಿಧಿಸುತ್ತದೆ ಎಂದು ತಿಳಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಗೆ 150 ವರ್ಷಕ್ಕೂ ಹೆಚ್ಚಿನ ಆಡಳಿತಾತ್ಮಕ ಇತಿಹಾಸವಿದ್ದು, ಹಿಂದೆ ಇದನ್ನು 'ಸೌತ್ ಕೆನರಾ' ಅಥವಾ 'ಸೌತ್ ಕನಾರಾ' ಎಂದು ಕರೆಯಲಾಗುತ್ತಿತ್ತು. 1977ರ ಜನವರಿಯಲ್ಲಿ ಕರ್ನಾಟಕ ಸರ್ಕಾರವು 'ಸೌತ್ ಕೆನರಾ' ಹೆಸರನ್ನು 'ದಕ್ಷಿಣ ಕನ್ನಡ' ಎಂದು ಬದಲಾಯಿಸಿದ್ದು, ಪ್ರಸ್ತುತ ಈ ಹೆಸರು ಸುಮಾರು ಐದು ದಶಕಗಳ ಐತಿಹಾಸಿಕ ನಿರಂತರತೆಯನ್ನು ಹೊಂದಿದೆ.

## ಮಂಗಳೂರಿನಲ್ಲಿ ರಿಕ್ಷಾ ಚಾಲಕರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಮಂಗಳೂರು : ಮಂಗಳೂರು ಆಟೋರಿಕ್ಷಾ ಚಾಲಕ ಮತ್ತು ಕಾರು ಚಾಲಕ ಸಹಕಾರಿ ಸಂಘ ನಿಯಮಿತದ ವತಿಯಿಂದ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಐವನ್ ಡಿ'ಸೋಜಾ ನೇತೃತ್ವದಲ್ಲಿ ಮಂಗಳೂರಿನ ಸಾರ್ವಜನಿಕರಿಗೆ ಹಾಗೂ ರಿಕ್ಷಾ ಚಾಲಕರಿಗಾಗಿ ಉಚಿತ ಬಿ.ಪಿ., ಶುಗರ್ ಹಾಗೂ ಹಿಮೋಗ್ಲೋಬಿನ್ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಎ.ಜೆ. ಆಸ್ಪತ್ರೆ ಮತ್ತು ವೈದ್ಯಕೀಯ ಮಹಾವಿದ್ಯಾಲಯದ ಡಾ. ಕವಿತಾ ಡಿ'ಸೋಜಾ ಅವರ ನೇತೃತ್ವದಲ್ಲಿ ನಡೆದ ಈ ಶಿಬಿರದಲ್ಲಿ ಭಾಗವಹಿಸಿದವರಿಗೆ ಸ್ಥಳದಲ್ಲೇ ಆರೋಗ್ಯ ಕಾರ್ಡ್‌ಗಳನ್ನು ವಿತರಿಸಿ, ಮುಂದೆಯೂ ನಿಯತಕಾಲಿಕವಾಗಿ ತಪಾಸಣೆ ಮಾಡಿಸಿಕೊಳ್ಳಲು ವ್ಯವಸ್ಥೆ ಕಲ್ಪಿಸಲಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಡಾ. ಕವಿತಾ ಡಿ'ಸೋಜಾ ಅವರು, ರಕ್ತದೊತ್ತಡ ಮತ್ತು ಮಧುಮೇಹವನ್ನು ಆರಂಭಿಕ ಹಂತದಲ್ಲಿಯೇ ಪತ್ತೆಹಚ್ಚಿ ನಿಯಂತ್ರಣದಲ್ಲಿಟ್ಟುಕೊಳ್ಳುವುದರಿಂದ ಮುಂದಿನ ದಿನಗಳಲ್ಲಿ ಉಂಟಾಗಬಹುದಾದ ಆರೋಗ್ಯ ಸಮಸ್ಯೆಗಳನ್ನು ತಡೆಗಟ್ಟಬಹುದು ಎಂದು ತಿಳಿಸಿದರು. ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ನಿಯಮಿತವಾಗಿ ತಪಾಸಣೆ ಮಾಡಿಸಿಕೊಳ್ಳುವುದರ ಜೊತೆಗೆ ಜೀವನಶೈಲಿಯಲ್ಲಿಯೂ ಅಗತ್ಯ ನಿಯಂತ್ರಣವನ್ನು ಕಾಪಾಡಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

## ದುಬೈನಲ್ಲಿ 'ವಾರ್ಷಿಕ ಹೆಲ್ತ್ ಅವಾರ್ಡ್ಸ್ 2026' ಪ್ರಧಾನ ಸಮಾರಂಭ




ದುಬೈ / ಯುಎಇ : ಯುಎಇಯ ಅತ್ಯಂತ ಪ್ರಸಿದ್ಧ ಹಾಗೂ ಮುಂಚೂಣಿಯಲ್ಲಿರುವ ಹೆಲ್ತ್ ಮತ್ತು ಲೈಫ್‌ಸ್ಟೈಲ್ ನಿಯತಕಾಲಿಕೆ 'ಹೆಲ್ತ್ ಮ್ಯಾಗಜೀನ್' ವತಿಯಿಂದ ಆಯೋಜಿಸಲಾಗುತ್ತಿರುವ ಪ್ರತಿಷ್ಠಿತ 'ವಾರ್ಷಿಕ ಹೆಲ್ತ್ ಅವಾರ್ಡ್ಸ್ 2026' ಪ್ರಶಸ್ತಿ ಪ್ರಧಾನ ಸಮಾರಂಭವು 2026ರ ಅಕ್ಟೋಬರ್ 28ರಂದು ಯುನೈಟೆಡ್ ಅರಬ್ ಎಮಿರೇಟ್ಸ್‌ನ ದುಬೈನಲ್ಲಿರುವ ಗ್ರಾಂಡ್ ಹಯಾತ್ ಹೋಟೆಲ್‌ನಲ್ಲಿ ನಡೆಯಲಿದೆ. ಸಂಯುಕ್ತ ಅರಬ್ ಎಮಿರೇಟ್ಸ್ ಸರ್ಕಾರದ ಸಂಪುಟ ಸದಸ್ಯರೂ ಹಾಗೂ ಸಹಿಷ್ಣುತೆ ಮತ್ತು ಸಹಬಾಳ್ವೆ ಸಚಿವರೂ ಆಗಿರುವ ಗೌರವಾನ್ವಿತ ಶೇಖ್ ನಹ್ಯಾನ್ ಮುಬಾರಕ್ ಅಲ್‌ನಹ್ಯಾನ್ ಪೋಷಕತ್ವದಲ್ಲಿ ಈ ಸಮಾರಂಭವು ನೆರವೇರಲಿದ್ದು, ಅವರೇ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಈ ವಿಶೇಷ ವೈದ್ಯಕೀಯ ಪ್ರಶಸ್ತಿ ಸಮಾರಂಭದ ಅಧ್ಯಕ್ಷತೆಯನ್ನು 'ತುಂಬೆ ಗ್ರೂಪ್'ನ ಸಂಸ್ಥಾಪಕ ಅಧ್ಯಕ್ಷರಾದ ಡಾ. ತುಂಬೆ ಮೊಯ್ದಿನ್ ಅವರು ವಹಿಸಲಿದ್ದಾರೆ.

# ಸುದ್ದಿ ತುಣುಕು

ಎಂಆರ್ ಪಿಎಲ್ ವಿರುದ್ಧ ಕಾರ್ಮಿಕ ಸಂಘಟನೆಗಳ ಧರಣಿ: ಮೃತಪಟ್ಟ ಮನೀಷ್ ಕುಟಂಬಕ್ಕೆ 1 ಕೋ.ರೂ. ಪರಿಹಾರ, ಕಾರ್ಮಿಕರಿಗೆ ಆರೋಗ್ಯ ವಿಮೆಗೆ ಆಗ್ರಹ

ಸೌಜನ್ಯಾ ಅತ್ಯಾಚಾರ, ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಮರು ತನಿಖೆಗೆ ನಿಯೋಜನೆಗೊಂಡ ನೂತನ ವಿಶೇಷ ತನಿಖಾ ತಂಡ ಮಂಗಳೂರಿಗೆ ಆಗಮಿಸಿದೆ.

ಮೋದಿಯವರ ಜನಪ್ರಿಯತೆ ಸಹಿಸಲಾಗದೆ ಕಾಂಗ್ರೆಸ್ ಚುನಾವಣಾ ಆಯೋಗದ ವಿರುದ್ಧ ಅನುಮಾನ ಹುಟ್ಟುಹಾಕುತ್ತಿದೆ ಎಂದು ವಿಜಯೇಂದ್ರ ಕಿಡಿಕಾರಿದ್ದಾರೆ.

ಬಿಜೆಪಿಯವರು ಎಸ್ಐಆರ್ ನೆಪದಲ್ಲಿ ಜನರ ಮತದಾನದ ಹಕ್ಕು ಕಿತ್ತುಕೊಳ್ಳುತ್ತಿದ್ದಾರೆ ಎಂದು ಡಿ.ಕೆ.ಶಿವಕುಮಾರ್ ನುಡಿದಿದ್ದಾರೆ.

4 ಸಾವಿರ ಕೋಟಿ ರೂ. ಬೆಂಬಲದ ಹೊಸ ಜವಳಿ ಮತ್ತು ಉಡುಪು ನೀತಿ 4.0 ಅಧಿಕೃತ ಜಾರಿ

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೂಲಿ ಕಾರ್ಮಿಕರ ನಕಲಿ ಜಿಪಿಎಸ್ ಫೋಟೋ ತೆಗೆದು ವಂಚಿಸಲಾಗುತ್ತಿದೆ ಎಂಬ ವರದಿ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ್ ಖಂಡ್ರೆ ತನಿಖೆಗೆ ಆದೇಶಿಸಿದ್ದಾರೆ.

ಬಿಟ್ ಕಾಯಿನ್ ಹಗರಣ ಸಂಬಂಧ ಅಕ್ರಮ ಹಣ ವರ್ಗಾವಣೆ ಹಾಗೂ ವೆಬ್ ಸೈಟ್ ಗಳ ಹ್ಯಾಕಿಂಗ್ ಆರೋಪದಲ್ಲಿ ಜಾರಿ ನಿರ್ದೇಶನಾಲಯ (ED) ಯಿಂದ ಬಂಧಿತರಾಗಿದ್ದ ಹ್ಯಾಕರ್ ಶ್ರೀಕೃಷ್ಣ (ಶ್ರೀಕಿ) ಹಾಗೂ ರಾಬಿನ್ ಖಂಡೇವಾಲಗೆ ಕರ್ನಾಟಕ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ.

ಎಸ್ಐಆರ್ ಪ್ರಕ್ರಿಯೆಯಲ್ಲಿ ದಿನಕ್ಕೊಂದು ಗೊಂದಲುಗಳು ಸೃಷ್ಟಿಯಾಗುತ್ತಿವೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಿಇಸಿ ಜ್ಞಾನೇಶ್ ಕುಮಾರ್ ಅವರನ್ನು ವಜಾಗೊಳಿಸಲು ಒತ್ತಾಯಿಸುವ ಬಗ್ಗೆ ಚರ್ಚೆ ಆಗಿದೆ ಎಂದು ಡಿಸಿಎಂ ಜಿ. ಪರಮೇಶ್ವರ್ ಹೇಳಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ರೈಲ್ವೆ ಪ್ರಯಾಣಿಕರ ದಶಕಗಳ ಕನಸು ಕೊನೆಗೂ ನನಸಾಗಿದೆ. ದಕ್ಷಿಣ ರೈಲ್ವೆಯ ಪಾಲಕ್ಕಾಡ್ ವಿಭಾಗದ ವ್ಯಾಪ್ತಿಯಲ್ಲಿದ್ದ ಮಂಗಳೂರು ರೈಲು ಪ್ರದೇಶವನ್ನು ನೈಋತ್ಯ ರೈಲ್ವೆಯ ಮೈಸೂರು ವಿಭಾಗಕ್ಕೆ ಅಧಿಕೃತವಾಗಿ ವರ್ಗಾಯಿಸಲಾಗಿದ್ದು, ಅಕ್ಟೋಬರ್ 1, 2026ರ ಮಧ್ಯರಾತ್ರಿಯಿಂದಲೇ ಈ ವಿಲೀನ ಪ್ರಕ್ರಿಯೆ ಜಾರಿಗೆ ಬಂದಿದೆ ಎಂದು ನೈಋತ್ಯ ವಲಯದ ಮೈಸೂರು ವಿಭಾಗದ ವಿಭಾಗೀಯ ಪ್ರಕಟಣೆ ತಿಳಿಸಿದೆ.

ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ನೇಮಕಾತಿಯ ದೈಹಿಕ ಪರೀಕ್ಷೆಗೆ ಹಾಜರಾಗಲು ಕೃತಕ ಬುದ್ಧಿಮತ್ತೆ (AI) ತಂತ್ರಜ್ಞಾನವನ್ನು ದುರ್ಬಳಕೆ ಮಾಡಿಕೊಂಡು ನಕಲಿ ಪ್ರವೇಶ ಪತ್ರ (Hall Ticket) ಸೃಷ್ಟಿಸಿ ವಂಚಿಸಲು ಯತ್ನಿಸಿದ ಆರೋಪದ ಮೇಲೆ ಕಡಬ ಮೂಲದ ಯುವಕನೊಬ್ಬನನ್ನು ಮಂಗಳೂರು ನಗರದ ಬರ್ಕೆ ಠಾಣಾ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನೈಋತ್ಯ ಮುಂಗಾರು ಹಂಗಾಮು ಅಧಿಕೃತವಾಗಿ ಕೊನೆಗೊಂಡಿದ್ದು, ಜೂನ್‌ನಿಂದ ಸೆಪ್ಟೆಂಬರ್ ವರೆಗಿನ ನಾಲ್ಕು ತಿಂಗಳ ಅವಧಿಯಲ್ಲಿ ಭಾರತದಲ್ಲಿ ವಾಡಿಕೆಗಿಂತ ಸುಮಾರು ಶೇ. 13 ರಷ್ಟು ಕಡಿಮೆ ಮಳೆಯಾಗಿದೆ. ಅಂಕಿ – ಅಂಶಗಳ ಪ್ರಕಾರ, ಇದು 2026ರ ಹಂಗಾಮನ್ನು ಅಲ್ಪ ಬರದ ವರ್ಗಕ್ಕೆ ಸೇರಿಸಿದೆ.

ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರ ಬ್ಯಾನರ್ ಹರಿದು ಹಾಕುವ ಕೀಳುಮಟ್ಟದ ರಾಜಕಾರಣದ ಅವಶ್ಯಕತೆ ನಮಗಿಲ್ಲ. ನಮಗೆ ಅಂಥ 420 ರಾಜಕಾರಣದ ಅವಶ್ಯಕತೆ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ತಿಳಿಸಿದ್ದಾರೆ.

ದೀಪಾವಳಿ ಹಬ್ಬದ ಸಮಯದಲ್ಲಿ ಪಟಾಕಿ ನಿಷೇಧ ಕುರಿತು ಸುಪ್ರೀಂ ಕೋರ್ಟ್? ಮಹತ್ವದ ಆದೇಶ ನೀಡಿದ್ದು, ಪಟಾಕಿಗಳನ್ನು ಸಂಪೂರ್ಣ ನಿಷೇಧಿಸುವುದಿಲ್ಲ. ಜೊತೆಗೆ ನಿರ್ಬಂಧ ರಹಿತವಾಗಿ ಸಿಡಿಸಲು ಅವಕಾಶ ನೀಡುವುದಿಲ್ಲ ಎಂದು ತಿಳಿಸಿದೆ.

# ನೀರ್ ದೋಸೆ



ಬೇಕಾಗುವ ಸಾಮಾಗ್ರಿಗಳು :
ನೆನೆಸಿದ ಅಕ್ಕಿ – 3 ಕಪ್
ತೆಂಗಿನಕಾಯಿ ತುರಿ – 1 ಕಪ್
ರುಚಿಗೆ ತಕ್ಕ ಉಪ್ಪು.

**ಮಾಡುವ ವಿಧಾನ :**

ನೆನೆಸಿದ ಅಕ್ಕಿ ಮತ್ತು ತೆಂಗಿನ ಕಾಯಿ ತುರಿಯನ್ನು ನುಣ್ಣಗೆ ರುಬ್ಬಿ ನಂತರ ಅದನ್ನು ಪಾತ್ರೆಗೆ ಹಾಕಿ ಹಿಟ್ಟಿಗೆ ನೀರು ಹಾಗೂ ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಕಲೆಸಿ. ಈ ಹಿಟ್ಟು ನೀರು–ನೀರಾಗಿರಬೇಕು ನಂತರ ದೋಸೆ ಕಾವಲಿಯಿಟ್ಟು, ಸ್ವಲ್ಪ ಎಣ್ಣೆ ಹಚ್ಚಿ ಒಂದು ಸೌಟು ದೋಸೆ ಹಿಟ್ಟನ್ನು ಹುಯ್ಯಿಬೇಕು. ನಂತರ ತವಾವನ್ನು ಮತ್ತೊಂದು ಪಾತ್ರೆಯಿಂದ ಮುಚ್ಚಿ ಒಂದು ನಿಮಿಷ ಬೇಯಿಸಿದರೆ ರುಚಿಕರವಾದ ನೀರು ದೋಸೆ ಸವಿಯಲು ಸಿದ್ಧ.

# ಅಮೆರಿಕ ಬಾಂಧವ್ಯಕ್ಕೆ ಧಕ್ಕೆ: ಜೈಶಂಕರ್



ನ್ಯೂಯಾರ್ಕ್: ನೆರೆಯ ದೇಶದಿಂದ ಉದ್ಭವಿಸುವ ಭಯೋತ್ಪಾದನೆಯು ಭಾರತದ ಅತ್ಯಂತ ಪ್ರಮುಖ ಕಳವಳಗಳಲ್ಲಿ ಒಂದಾಗಿದ್ದು, ನವದೆಹಲಿಯ ಪಾಲುದಾರ ರಾಷ್ಟ್ರಗಳು ಇದನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳದಿದ್ದರೆ ಅದು ದ್ವಿಪಕ್ಷೀಯ ಬಾಂಧವ್ಯದ ಮೇಲೆ ನೇರ ಪರಿಣಾಮ ಬೀರಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಎಚ್ಚರಿಸಿದ್ದಾರೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ (UNGA) ಉನ್ನತ ಮಟ್ಟದ ಅಧಿವೇಶನದ ಅಂಗವಾಗಿ 'ಏಷ್ಯಾ ಸೊಸೈಟಿ' ಆಯೋಜಿಸಿದ್ದ ವಿಶೇಷ ಸಂವಾದದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

# ನೇಪಾಳದಲ್ಲಿ ಭಾರಿ ಮಳೆ, ಭೂಕುಸಿತ



ಖಠ್ಮಂಡು: ನೇಪಾಳದಲ್ಲಿ ಕಳೆದ ಕೆಲ ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ವ್ಯಾಪಕ ಪ್ರವಾಹ ಹಾಗೂ ಭೂಕುಸಿತ ಉಂಟಾಗಿದ್ದು, ಕನಿಷ್ಠ 21 ಮಂದಿ ಮೃತಪಟ್ಟಿದ್ದಾರೆ. ಹವಾಮಾನ ವೈಪರೀತ್ಯದಿಂದಾಗಿ ಹಲವು ಮನೆಗಳು ಹಾನಿಗೊಳಗಾಗಿದ್ದು, ಮುಖ್ಯ ರಸ್ತೆಗಳಲ್ಲಿ ಸಂಚಾರ ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿದೆ. ಪಾಲ್ಪಾ ಜಿಲ್ಲೆಯ ಮತಗಢಿ ಗ್ರಾಮೀಣ ಪುರಸಭೆ ವ್ಯಾಪ್ತಿಯಲ್ಲಿ ಭೀಕರ ಭೂಕುಸಿತ ಸಂಭವಿಸಿದ್ದು, ಐವರು ಮಣ್ಣಿನಡಿಯಲ್ಲಿ ಸಿಲುಕಿ ಮೃತಪಟ್ಟಿದ್ದಾರೆ.

# ಅಮೆರಿಕ–ಚೀನಾ ಸಹಕಾರಕ್ಕೆ ಕ್ಸಿ ಜಿನ್‌ಪಿಂಗ್ ಕರೆ



ವಾಷಿಂಗ್ಟನ್: ಅಮೆರಿಕ ಮತ್ತು ಚೀನಾ ಪರಸ್ಪರ ಎದುರಾಳಿಗಳಂತೆ ನೋಡಿಕೊಳ್ಳದೆ, ವಿಶ್ವದ ಪ್ರಮುಖ ಶಕ್ತಿಗಳಾಗಿ ಒಟ್ಟಾಗಿ ಕೆಲಸ ಮಾಡಬೇಕು ಎಂದು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಕರೆ ನೀಡಿದ್ದಾರೆ. ಶ್ವೇತಭವನದಲ್ಲಿ ನಡೆದ ದ್ವಿಪಕ್ಷೀಯ ಮಾತುಕತೆ ಹಾಗೂ ಔತಣಕೂಟದ ವೇಳೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಮಾತನಾಡಿದ ಅವರು, ಉಭಯ ದೇಶಗಳ ನಡುವಿನ ಸ್ಪರ್ಧೆಯು ಆರೋಗ್ಯಕರವಾಗಿರಬೇಕೇ ಹೊರತು, ಒಬ್ಬರು ಗೆದ್ದು ಮತ್ತೊಬ್ಬರು ಸೋಲುವ ರೀತಿಯ ಪೈಪೋಟಿ ಇರಬಾರದು ಎಂದು ಸ್ಪಷ್ಟಪಡಿಸಿದ್ದಾರೆ.

# ಹಾರ್ಮುಜ್ ಜಲಸಂಧಿ ತೆರೆಯಲು ಇರಾನ್ ಆಫರ್



ಇರಾನ್ : ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ತೀವ್ರಗೊಂಡಿರುವ ಯುದ್ಧದ ಮಧ್ಯೆಯೇ ರಾಜತಾಂತ್ರಿಕ ಮಟ್ಟದಲ್ಲಿ ಮಹತ್ವದ ಬೆಳವಣಿಗೆಯೊಂದು ನಡೆದಿದೆ. ವಾಷಿಂಗ್ಟನ್ ತನ್ನ ಕಠಿಣ ಆರ್ಥಿಕ ದಿಗ್ಬಂಧನ ಹಾಗೂ ನೌಕಾ ನಿರ್ಬಂಧಗಳನ್ನು ಸಡಿಲಿಸಿದರೆ, ಕೇವಲ ಏಳು ದಿನಗಳಲ್ಲಿ ಜಾಗತಿಕ ಇಂಧನ ಸಾಗಣೆಯ ಪ್ರಮುಖ ಮಾರ್ಗವಾದ ಹಾರ್ಮುಜ್ ಜಲಸಂಧಿಯನ್ನು ಮತ್ತೆ ಉಚಿತ ಹಾಗೂ ಮುಕ್ತ ಸಂಚಾರಕ್ಕೆ ತೆರೆಯುವುದಾಗಿ ಇರಾನ್ ಆಫರ್ ನೀಡಿದೆ.

# ಈ–35 ಯುದ್ಧ ವಿಮಾನದ ಬಿಡಿ ಭಾಗಗಳು ದಾರಿ ತಪ್ಪಿ ಚೀನಾಕ್ಕೆ!



ಆಸ್ಟ್ರೇಲಿಯಾ : ಆಸ್ಟ್ರೇಲಿಯಾದಿಂದ ಅಮೆರಿಕಕ್ಕೆ ದುರಸ್ತಿಗಾಗಿ ರವಾನೆಯಾಗುತ್ತಿದ್ದ ಅಮೆರಿಕದ ಅತ್ಯಾಧುನಿಕ ಈ–35 ಲೈಟ್ನಿಂಗ್ II ಯುದ್ಧವಿಮಾನದ ಪ್ರಮುಖ ಬಿಡಿಭಾಗಗಳು ಮಾರ್ಗ ಮಧ್ಯೆ ದಾರಿ ತಪ್ಪಿ ಚೀನಾದ ಸಂಪೂರ್ಣ ಆಡಳಿತಕ್ಕೊಳಪಟ್ಟ ಹಾಂಗ್ ಕಾಂಗ್ ತಲುಪಿದ್ದು, ಪ್ರಸ್ತುತ ಚೀನಾ ಸರ್ಕಾರವು ಅವುಗಳನ್ನು ತನ್ನ ವಶಕ್ಕೆ ಪಡೆದುಕೊಂಡಿದೆ ಎಂದು ಬ್ಲೂಮ್‌ಬರ್ಗ್ ವರದಿ ಮಾಡಿದೆ. ಅತ್ಯುನ್ನತ ವರ್ಗೀಕೃತ ತಂತ್ರಜ್ಞಾನವನ್ನು ಒಳಗೊಂಡಿರುವ ಈ ರಹಸ್ಯ ಭಾಗಗಳು ಅನಿರೀಕ್ಷಿತವಾಗಿ ಹಾಂಗ್ ಕಾಂಗ್‌ಗೆ ಹೇಗೆ ತಲುಪಿದವು ಎಂಬ ಬಗ್ಗೆ ಅಮೆರಿಕದ ರಕ್ಷಣಾ ಇಲಾಖೆ ತೀವ್ರ ಆತಂಕ ವ್ಯಕ್ತಪಡಿಸಿದ್ದು, ಉನ್ನತ ಮಟ್ಟದ ತನಿಖೆ ಆರಂಭಿಸಿವೆ.

# ಇರಾನ್ ಮಣಿಸಿ ಚಿನ್ನದ ಪದಕ ಉಳಿಸಿಕೊಂಡ ಭಾರತೀಯ ಮಹಿಳಾ ಕಬಡ್ಡಿ ಪಡೆ




ಪಾನ್ : ಏಷ್ಯನ್ ಗೇಮ್ಸ್‌ನ ರೋಚಕ ಫೈನಲ್ ಪಂದ್ಯದಲ್ಲಿ ಇರಾನ್ ವಿರುದ್ಧ ತೀವ್ರ ಪೈಪೋಟಿಯ ನಡುವೆಯೂ ಭಾರತ ಮಹಿಳಾ ಕಬಡ್ಡಿ ತಂಡವು 37–34 ಅಂಕಗಳಿಂದ ಗೆದ್ದು ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಿದೆ. ಅಂತಿಮ ಕ್ಷಣದವರೆಗೂ ಉಸಿರು ಬಿಗಿಹಿಡಿಯುವಂತೆ ಸಾಗಿದ ಈ ಹಣಾಹಣಿಯಲ್ಲಿ ಭಾರತೀಯ ಆಟಗಾರ್ತಿಯರು ರಕ್ಷಣಾ ವಿಭಾಗದಲ್ಲಿ (ಡಿಫೆನ್ಸ್) ಅದ್ಭುತ ಪ್ರದರ್ಶನ ನೀಡಿ ಭರ್ಜರಿ ಗೆಲುವು ದಾಖಲಿಸಿದ್ದಾರೆ.

# ಚೀನಾ ಮಣಿಸಿ ಭಾರತಕ್ಕೆ ಚಿನ್ನದ ಪದಕ!



ಜಪಾನ್ : ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಪದಕಗಳ ಬೇಟೆ ಮುಂದುವರಿದಿದ್ದು, ನಡೆದ ಪುರುಷರ ಆರ್ಚರಿ ಕಾಂಪೌಂಡ್ ಟೀಮ್ ಇವೆಂಟ್ ಫೈನಲ್ ಪಂದ್ಯದಲ್ಲಿ ಭಾರತ ತಂಡ ಸುವರ್ಣ ಪದಕ ಗೆದ್ದು ಬೀಗಿದೆ. ಸಾಹಿಲ್ ಜಾಧವ್, ಕುಶಾಲ್ ದಲಾಲ್ ಮತ್ತು ಗಣೇಶ್ ಮಣಿರತ್ನಂ ಅವರನ್ನು ಒಳಗೊಂಡ ಭಾರತೀಯ ಪಡೆ ಬಲಿಷ್ಠ ಚೀನಾ ತಂಡವನ್ನು 238–237 ಅಂಕಗಳ ರೋಚಕ ಅಂತರದಿಂದ ಮಣಿಸಿ ಈ ಐತಿಹಾಸಿಕ ಸಾಧನೆ ಮಾಡಿದೆ. ಫೈನಲ್‌ನಲ್ಲಿ ಈ ಐತಿಹಾಸಿಕ ಗೆಲುವು ಸಾಧಿಸುವುದರ ಜೊತೆಗೆ 2028ರ ಲಾಸ್ ಏಂಜಲಿಸ್ ಒಲಿಂಪಿಕ್ಸ್‌ಗೂ ಅರ್ಹತೆ ಗಿಟ್ಟಿಸಿಕೊಂಡಿದೆ.

# ಏಷ್ಯನ್ ಗೇಮ್ಸ್ : ಭಾರತಕ್ಕೆ 3 ಚಿನ್ನದ ಸಂಭ್ರಮ



ಜಪಾನ್ : ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳು ಅದ್ಭುತ ಪ್ರದರ್ಶನ ಮುಂದುವರಿಸಿದ್ದು, ಒಂದೇ ದಿನ ಮೂರು ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಮಿಶ್ರ ಟ್ರ್ಯಾಪ್ ಶೂಟಿಂಗ್ ಸ್ಪರ್ಧೆಯಲ್ಲಿ ನೀರು ಧಂಡಾ ಮತ್ತು ಕೈನಾನ್ ಚೆನೈ ಜೋಡಿ ಬಂಗಾರದ ಪದಕ ಗೆಲ್ಲುವುದರೊಂದಿಗೆ ದಿನದ ಮೂರನೇ ಚಿನ್ನ ಭಾರತದ ಖಾತೆಗೆ ಸೇರಿತು. ಶೂಟಿಂಗ್ ಫೈನಲ್‌ನಲ್ಲಿ ನೀರು ಧಂಡಾ ಮತ್ತು ಕೈನಾನ್ ಚೆನೈ ಆರಂಭಿಕ ಹಿನ್ನಡೆಯಿಂದ ಅದ್ಭುತವಾಗಿ ಚೇತರಿಸಿಕೊಂಡು ಐತಿಹಾಸಿಕ ಸಾಧನೆ ಮಾಡಿದರು.

# ನಕಲಿ ಔಷಧ ಜಾಲದ ಮಾಸ್ಟರ್‌ಮೈಂಡ್ ಪ್ರಶಾಂತ್ ಬಂಧನ



ಬೆಂಗಳೂರು: ರಾಜ್ಯಾದ್ಯಂತ ಸಂಚಲನ ಮೂಡಿಸಿದ್ದ ಬಹುಕೋಟಿ ನಕಲಿ ಔಷಧ ತಯಾರಿಕೆ ಹಾಗೂ ಅಕ್ರಮ ಮಾರಾಟ ಜಾಲದ ಪ್ರಮುಖ ಸೂತ್ರಧಾರ ಪ್ರಶಾಂತ್‌ನನ್ನು ವಿಶೇಷ ತನಿಖಾ ತಂಡ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಿದೆ. ಪ್ರಕರಣ ಬಯಲಿಗೆ ಬರುತ್ತಿದ್ದಂತೆ ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ಆರೋಪಿ ಪ್ರಶಾಂತ್ ವಿದೇಶಕ್ಕೆ ಪರಾರಿಯಾಗಿದ್ದ. ಮೂಲಗಳ ಪ್ರಕಾರ, ಆತ ಅಜರ್‌ಬೈಜಾನ್‌ನಲ್ಲಿ ತಲೆಮರೆಸಿಕೊಂಡಿದ್ದ. ಅಲ್ಲಿಂದ ಆತ ನಗರಕ್ಕೆ ಹಿಂತಿರುಗುತ್ತಿದ್ದಾನೆಂಬ ಸುಳಿವಿನ ಮೇರೆಗೆ ಎಸ್‌ಐಟಿ ಅಧಿಕಾರಿಗಳು ವಿಮಾನ ನಿಲ್ದಾಣದಲ್ಲೇ ಆತನನ್ನು ವಶಕ್ಕೆ ಪಡೆದಿದ್ದಾರೆ.

# ಮೈಸೂರು ದಸರಾ ಉದ್ಘಾಟನೆಗೆ ಗವಿಸಿದ್ದೇಶ್ವರ ಶ್ರೀಗಳಿಗೆ ಅಧಿಕೃತ ಆಹ್ವಾನ



ಕೊಪ್ಪಳ : ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಉದ್ಘಾಟನೆಗೆ ಕೊಪ್ಪಳದ ಗವಿಮಠದ ಪರಮಪೂಜ್ಯ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮೀಜಿ ಅವರಿಗೆ ಅಧಿಕೃತವಾಗಿ ಆಹ್ವಾನ ನೀಡಲಾಗಿದೆ. ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ಅವರ ನೇತೃತ್ವದ ನಿಯೋಗ ಗವಿಮಠಕ್ಕೆ ಭೇಟಿ ನೀಡಿ ಶ್ರೀಗಳಿಗೆ ಆಹ್ವಾನ ಪತ್ರಿಕೆ ಹಸ್ತಾಂತರಿಸಿತು. ಸರ್ಕಾರದ ಈ ಆಹ್ವಾನವನ್ನು ಶ್ರೀಗಳು ಅತ್ಯಂತ ಸಂತೋಷದಿಂದ ಸ್ವೀಕರಿಸಿದ್ದು, ಇದರೊಂದಿಗೆ ದಸರಾ ಉದ್ಘಾಟನೆಗೆ ಸಂಬಂ ಧಿಸಿದ ಎಲ್ಲಾ ಗೊಂದಲ ಹಾಗೂ ಊಹಾ ಪೋಹಗಳಿಗೆ ಅಧಿಕೃತವಾಗಿ ತೆರೆಬಿದ್ದಿದೆ.

# ಸಿವಿಲ್ ವ್ಯಾಜ್ಯದಲ್ಲಿ ಪೊಲೀಸ್ ಹಸ್ತಕ್ಷೇಪ: ವಿಚಾರಣೆಗೆ ಹೈಕೋರ್ಟ್ ಆದೇಶ

ಬೆಂಗಳೂರು: ನ್ಯಾಯಾಲಯದ ನೂರಾರು ಆದೇಶಗಳು ಮತ್ತು ಸರ್ಕಾರದ ಸುತ್ತೋಲೆಗಳ ಹೊರತಾಗಿಯೂ ಸಿವಿಲ್ ವ್ಯಾಜ್ಯಗಳಲ್ಲಿ ಪೊಲೀಸರು ಹಸ್ತಕ್ಷೇಪ ಮಾಡುತ್ತಿರುವುದಕ್ಕೆ ಕರ್ನಾಟಕ ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ವಾಣಿಜ್ಯ ಒಪ್ಪಂದಕ್ಕೆ ಸಂಬಂಧಿಸಿದ ಸಿವಿಲ್ ಪ್ರಕರಣದಲ್ಲಿ ಖಾಸಗಿ ಕಂಪನಿಯ ಬ್ಯಾಂಕ್ ಖಾತೆಗಳನ್ನು ಫ್ರೀಜ್ ಮಾಡಿಸಿದ್ದ ಮಂಗಳೂರಿನ ಉಲ್ಲಾಳ ಠಾಣೆ ತನಿಖಾಧಿಕಾರಿ ವಿರೂಪಾಕ್ಷಯ್ಯ ವಿರುದ್ಧ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಮಂಗಳೂರು ನಗರ ಪೊಲೀಸ್ ಆಯುಕ್ತರಿಗೆ ಹೈಕೋರ್ಟ್ ತಾಕೀತು ಮಾಡಿದೆ.



# ರಾಜ್ಯದ ಬರ ಪರಿಸ್ಥಿತಿ ಅಧ್ಯಯನಕ್ಕೆ ಅಕ್ಟೋಬರ್ 3ರಿಂದ ಕೇಂದ್ರ ತಂಡ




ಬೆಂಗಳೂರು : ರಾಜ್ಯದಲ್ಲಿನ ತೀವ್ರ ಬರ ಪರಿಸ್ಥಿತಿ ಹಾಗೂ ಬೆಳೆ ಹಾನಿಯ ನೈಜ ಸ್ಥಿತಿಗತಿಯನ್ನು ಪರಿಶೀಲಿಸಲು ಕೇಂದ್ರ ಸರ್ಕಾರದ ಅಂತರ–ಸಚಿವಾಲಯಗಳ ಅಧಿಕಾರಿಗಳ ಅಧ್ಯಯನ ತಂಡ (ಐಎಂಸಿಟಿ) ಅಕ್ಟೋಬರ್ 3ರಿಂದ 6ರವರೆಗೆ ವಿವಿಧ ಜಿಲ್ಲೆಗಳಲ್ಲಿ ಅಧ್ಯಯನ ಪ್ರವಾಸ ಕೈಗೊಳ್ಳಲಿದೆ. ಕೇಂದ್ರ ಕೃಷಿ ಇಲಾಖೆಯ ಜಂಟಿ ಕಾರ್ಯದರ್ಶಿ ಅಜೀತ್ ಕುಮಾರ್ ಸಾಹು ನೇತೃತ್ವದ 10ಸದಸ್ಯರ ಉನ್ನತ ಮಟ್ಟದ ಸಮಿತಿಯು ಅಕ್ಟೋಬರ್ 3ರಂದು ಬೆಳಿಗ್ಗೆ ಬೆಂಗಳೂರಿಗೆ ಆಗಮಿಸಲಿದ್ದು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಕಂದಾಯ (ವಿಪತ್ತು ನಿರ್ವಹಣೆ) ಇಲಾಖೆಯ ಅಧಿಕಾರಿಗಳೊಂದಿಗೆ ಪ್ರಾಥಮಿಕ ಸಭೆ ನಡೆಸಲಿದೆ.

# ಆರ್‌ಎಸ್‌ಎಸ್ ನಾಶ ಕಾಂಗ್ರೆಸ್‌ನ 'ತಿರುಕನ ಕನಸು': ಡಾ. ಸಿ.ಟಿ. ರವಿ



ಬೆಂಗಳೂರು: ಆರ್‌ಎಸ್‌ಎಸ್ ಅನ್ನು ಟೀಕಿಸುವ ವಿಚಾರದಲ್ಲಿ ಕಾಂಗ್ರೆಸ್ ನಾಯಕರ ನಡುವೆ ಸ್ಪರ್ಧೆ ಏರ್ಪಟ್ಟಿದ್ದು, ಸಂಘವನ್ನು ನಾಶ ಮಾಡುವುದಾಗಿ ಹೇಳಿರುವ ಬಿ.ಕೆ. ಹರಿಪ್ರಸಾದ್ ಅವರ ಹೇಳಿಕೆ 'ತಿರುಕನ ಕನಸು' ಎಂದು ವಿಧಾನ ಪರಿಷತ್ ಸದಸ್ಯ ಡಾ. ಸಿ.ಟಿ. ರವಿ ಟೀಕಿಸಿದ್ದಾರೆ. ಶತಮಾನೋತ್ಸವ ಆಚರಿಸುತ್ತಿರುವ ಆರ್‌ಎಸ್‌ಎಸ್ ರಾಷ್ಟ್ರಭಕ್ತಿಯ ಸಿದ್ಧಾಂತವಾಗಿದ್ದು, ಅದನ್ನು ನಾಶ ಮಾಡಲು ಹೊರಡುವುದು ರಾಷ್ಟ್ರಭಕ್ತಿಯನ್ನೇ ನಾಶ ಮಾಡುವುದಕ್ಕೆ ಸಮಾನ. ಕಾಂಗ್ರೆಸ್ ನಾಯಕರು ಹೊಸ ಕ್ಷೇತ್ರಗಳನ್ನು ಗೆಲ್ಲುವ ಮಾತಾಡುವ ಮೊದಲು, ಪ್ರಸ್ತುತ ಗೆದ್ದಿರುವ ಕ್ಷೇತ್ರಗಳನ್ನು ಉಳಿಸಿಕೊಳ್ಳುವ ಬಗ್ಗೆ ಗಮನಹರಿಸಬೇಕು ಎಂದು ವ್ಯಂಗ್ಯವಾಡಿದ್ದಾರೆ.

# ಸಿಇಸಿ ವಿರುದ್ಧ ಕಾಂಗ್ರೆಸ್ ಸಮರ: ಬಿಜೆಪಿ ಭಾರಿ ತಿರುಗೇಟು



ನವದೆಹಲಿ : ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ವಿರುದ್ಧ ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ನಾಯಕತ್ವ ತೀವ್ರ ಹೋರಾಟ ಆರಂಭಿಸಿದ್ದು, ಆಡಳಿತಾರೂಢ ಬಿಜೆಪಿ ಇದಕ್ಕೆ ಸಡ್ಡು ಹೊಡೆಯಲು ಬೃಹತ್ ಕಾರ್ಯತಂತ್ರ ರೂಪಿಸಿದೆ. ಬಿಜೆಪಿ ತನ್ನ 12 ರಾಜ್ಯಗಳ ಮುಖ್ಯಮಂತ್ರಿಗಳನ್ನು ಏಕಕಾಲಕ್ಕೆ ಮಾಧ್ಯಮಗೋಷ್ಠಿಗೆ ಇಳಿಸಿ ಕಾಂಗ್ರೆಸ್ ವಿರುದ್ಧ ಪ್ರಬಲ ವಾಗ್ದಾಳಿ ನಡೆಸಲು ಸಜ್ಜಾಗಿದೆ. ವಿಪಕ್ಷಗಳು ಯಾವುದೇ ಆಧಾರವಿಲ್ಲದೆ ಸಂವಿಧಾನಾತ್ಮಕ ಸಂಸ್ಥೆಗಳ ವಿಶ್ವಾಸಾರ್ಹತೆಯನ್ನು ಕುಗ್ಗಿಸಲು ಮತ್ತು ದೇಶದ ವರ್ಚಸ್ಸಿಗೆ ಧಕ್ಕೆ ತರಲು ಯತ್ನಿಸುತ್ತಿವೆ ಎಂದು ಬಿಜೆಪಿ ಆಪಾದಿಸಿದೆ.

# ಅಕ್ಟೋಬರ್‌ನಲ್ಲಿ ಶೇ.100 ಎಥೆನಾಲ್ ಕಾರು ಲಾಂಚ್–ಗಡ್ಕರಿ

ಮಧ್ಯಾಪ್ರದೇಶ : ಅಕ್ಟೋಬರ್ ತಿಂಗಳೊಳಗೆ ಶೇಕಡಾ 100ರಷ್ಟು ಎಥೆನಾಲ್‌ನಿಂದಷ್ಟೇ ಚಲಿಸಬಲ್ಲ ಫ್ಲೆಕ್ಸ್ ಇಂಜಿನ್ ಚಾಲಿತ ಕಾರುಗಳು ಮಾರುಕಟ್ಟೆಗೆ ಪ್ರವೇಶಿಸುವ ಸಾಧ್ಯತೆಗಳಿವೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ. ಮಧ್ಯಪ್ರದೇಶದಲ್ಲಿ 'ಸುಗಮ ಸಾರಿಗೆ ಸೇವೆ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಟಾಟಾ, ಸುಜುಕಿ, ಟೊಯೊಟಾ ಹಾಗೂ ಮಹಿಂದ್ರಾದಂತಹ ಪ್ರಮುಖ ವಾಹನ ತಯಾರಿಕಾ ಸಂಸ್ಥೆಗಳು ಶೇ.100ರಷ್ಟು ಎಥೆನಾಲ್ ಇಂಜಿನ್ ಹೊಂದಿರುವ ವಾಹನಗಳನ್ನು ಬಿಡುಗಡೆ ಮಾಡಲು ಸಿದ್ಧತೆ ನಡೆಸುತ್ತಿವೆ ಎಂದು ಹೇಳಿದರು.



# ಭಾರತೀಯ ಸೇನೆಗೆ 'ಟ್ಯಾಂಕ್ ಕಿಲ್ಲರ್' ನಾಗ್ ಕ್ಷಿಪಣಿ ಸೇರ್ಪಡೆ



ನವದೆಹಲಿ : ರಕ್ಷಣಾ ಕ್ಷೇತ್ರದಲ್ಲಿ ಸ್ವದೇಶಿ ತಂತ್ರಜ್ಞಾನದ ಹಿರಿಮೆಯನ್ನು ಸಾರುವ 'ನಾಗ್ ಎಂಕೆ–2' ಟ್ಯಾಂಕ್ ವಿರೋಧಿ ಕ್ಷಿಪಣಿ ಪರೀಕ್ಷೆಗಳು ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಭಾರತೀಯ ಸೇನೆಗೆ ಸೇರ್ಪಡೆಯಾಗಲು ಸಂಪೂರ್ಣ ಸಜ್ಜಾಗಿದೆ. ಪೃಥ್ವಿ, ಅಗ್ನಿ, ಆಕಾಶ್ ಹಾಗೂ ತ್ರಿಶೂಲ್ ಕ್ಷಿಪಣಿಗಳೊಂದಿಗೆ ರೂಪುಗೊಂಡ ನಾಗ್, ಇಂದು ಸುಮಾರು ನಾಲ್ಕು ದಶಕಗಳ ಸ್ವದೇಶಿ ವಿಜ್ಞಾನಿಗಳ ಸತತ ಪರಿಶ್ರಮದ ಫಲವಾಗಿ ಸಾಕಾರಗೊಂಡಿದೆ. ಮೂರನೇ ತಲೆಮಾರಿನ ತಂತ್ರಜ್ಞಾನ ಹೊಂದಿರುವ ಈ 'ಫೈರ್ ಅಂಡ್ ಫಾರ್ಗೆಟ್' ಕ್ಷಿಪಣಿಯು, ಉಡಾವಣೆಗೂ ಮುನ್ನವೇ ಶತ್ರುಗಳ ಟ್ಯಾಂಕ್‌ಗಳನ್ನು ಲಾಕ್ ಮಾಡಿ ಸ್ವತಃ ದಾಳಿ ನಡೆಸುತ್ತದೆ.

# ಮತದಾರರಿಗೆ ಬಿಗ್ ರಿಲೀಫ್: ಮನೆಬಾಗಿಲಿಗೇ ಬರಲಿದ್ದಾರೆ ಬಿಎಲ್‌ಒ!




ನವದೆಹಲಿ: ಪ್ರಸ್ತುತ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ (SIR) ಪ್ರಕ್ರಿಯೆಯಲ್ಲಿ ಪ್ರಮುಖ ಬದಲಾವಣೆಗಳನ್ನು ಘೋಷಿಸಲಾಗಿದ್ದು, ಸಾರ್ವಜನಿಕರು ಅನುಭವಿಸುತ್ತಿದ್ದ ಅಲೆದಾಟ ಮತ್ತು ತೊಂದರೆಗಳಿಗೆ ಸಂಪೂರ್ಣ ತೆರೆ ಬಿದ್ದಿದೆ. ಆಯೋಗದ ನೂತನ ಆದೇಶದ ಪ್ರಕಾರ, ಇನ್ಮುಂದೆ ಸಾರ್ವಜನಿಕರು ಯಾವುದೇ ವಿಚಾರಣೆಗೆ ಖುದ್ದಾಗಿ ಕಚೇರಿಗಳಿಗೆ ತೆರಳುವ ಅಗತ್ಯವಿಲ್ಲ. ಬದಲಾಗಿ ಬೂತ್ ಮಟ್ಟದ ಅಧಿಕಾರಿಗಳು (BLO) ನೇರವಾಗಿ ಸಾರ್ವಜನಿಕರ ಮನೆಬಾಗಿಲಿಗೆ ಆಗಮಿಸಿ, ಅಗತ್ಯ ದಾಖಲೆಗಳನ್ನು ಪರಿಶೀಲಿಸಿ ಸ್ಥಳದಲ್ಲೇ 'ECINet' ಪೋರ್ಟಲ್‌ಗೆ ಅಪ್‌ಲೋಡ್ ಮಾಡಲಿದ್ದಾರೆ.

# ಸಿಇಸಿ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಟಿಎಂಸಿ ಹಾಗೂ ಸಿಜೆಪಿ ಒತ್ತಾಯ



ನವದೆಹಲಿ: ಕಳಂಕಿತ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ಕೆಳಗಿಳಿಸಲು ಕಾಕ್ರೋಚ್ ಜನತಾ ಪಕ್ಷದಿಂದ (ಸಿಜೆಪಿ) ಮಾತ್ರ ಸಾಧ್ಯ ಎಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದ ಕಲ್ಯಾಣ್ ಬ್ಯಾನರ್ಜಿ ಹೇಳಿದ್ದಾರೆ. ವಿರೋಧ ಪಕ್ಷಗಳ ಮಿತಿಗಳನ್ನು ಒತ್ತಿ ಹೇಳಿದ ಅವರು, ಕಾಕ್ರೋಚ್ ಜನತಾ ಪಕ್ಷ ಈ ವಿಷಯವನ್ನು ಸವಾಲಾಗಿ ಸ್ವೀಕರಿಸಿ ಹೋರಾಟಕ್ಕೆ ಮುಂದಾದರೆ ಮಾತ್ರ ಶೀಘ್ರ ಫಲಿತಾಂಶ ಸಿಗಲಿದ್ದು, ಈ ವಿವಾದಕ್ಕೆ ತಕ್ಷಣವೇ ತೆರೆಬೀಳಲಿದೆ ಎಂದಿದ್ದಾರೆ. ಸಿಜೆಪಿ ನಡೆಸಿದ ತೀವ್ರ ಹೋರಾಟದ ಫಲವಾಗಿಯೇ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕಾಯಿತು ಎಂಬುದನ್ನು ಅವರು ನೆನಪಿಸಿದ್ದಾರೆ.

# ಲಿಂಗ ತಾರತಮ್ಯ ಎಸಗಿದ IOC : 12 ಲಕ್ಷ ಪರಿಹಾರ ನೀಡಲು ಆದೇಶ

ನವದೆಹಲಿ : ಹರಿಯಾಣದ ಕರ್ನಾಲ್ ಜಿಲ್ಲೆಯ ಗುಡಾ ಗ್ರಾಮದ ಸುಮಿತ್ರಾ ಎಂಬ ಮಹಿಳೆಗೆ 1988ರಲ್ಲಿ ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಎಲ್‌ಪಿಜಿ ಬಾಟ್ಲಿಂಗ್ ಘಟಕದಲ್ಲಿ ಸಹಾಯಕ ಹುದ್ದೆಗೆ ಅರ್ಜಿ ಸಲ್ಲಿಸಿದಾಗ ಲಿಂಗ ತಾರತಮ್ಯ ದ ಕಾರಣಕ್ಕೆ ಕೆಲಸ ನಿರಾಕರಿಸಲಾಗಿತ್ತು. ಕೆಲ ಸಕ್ಕಾಗಿ ಅರ್ಜಿ ಸಲ್ಲಿಸಿದ್ದ 49 ಅಭ್ಯರ್ಥಿಗಳಲ್ಲಿ 43 ಮಂದಿಗೆ ನೇಮಕಾತಿ ಲಭಿಸಿತ್ತು. ಆದರೆ ಮಹಿಳೆ ಎಂಬ ಒಂದೇ ಕಾರಣಕ್ಕೆ ತಮಗೆ ಕೆಲಸ ನಿರಾಕರಿಸಲಾಗಿದೆ ಎಂದು ತಿಳಿದ ಸುಮಿತ್ರಾ, ತಮ್ಮ ಪತಿ ಬೆಂಬಲದೊಂದಿಗೆ ನ್ಯಾಯಕ್ಕಾಗಿ ಸತತ ಸುಮಾರು 4ದಶಕಗಳ ಕಾಲ ಸುದೀರ್ಘ ಕಾನೂನು ಹೋರಾಟ ನಡೆಸಿದರು.





ಕರಾವಳಿ ತರಂಗಿಣಿ

# ಕಲಾ ತರಂಗಿಣಿ



## ಸಾಯಿ ಶ್ರೀನಿಧಿ ಸ್ವತಂತ್ರ ನಿರ್ದೇಶಕರಾಗಿ ಪಾದಾರ್ಪಣೆ

ಕಳೆದ ಕೆಲವು ದಿನಗಳ ಹಿಂದೆ ತೆರೆಕಂಡು ಎಲ್ಲರ ಮನ ಗೆದ್ದಿದ್ದ ಐದು ಕಥೆಗಳ 'ಬಿ.ಟಿ.ಎಸ್' ಚಿತ್ರದ ಐದು ನಿರ್ದೇಶಕರಲ್ಲಿ ಸಾಯಿ ಶ್ರೀನಿಧಿ ಕೂಡ ಒಬ್ಬರು. 'ಮಠ' ಗುರುಪ್ರಸಾದ್ ಅವರ ಗರಡಿಯಲ್ಲಿ ಪಳಗಿರುವ ಸಾಯಿ ಶ್ರೀನಿಧಿ ಅವರು 'ನೋಡಿದವರು ಏನಂತಾರೆ' ಚಿತ್ರಕ್ಕೆ ಸಹ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಸಾಯಿ ಶ್ರೀನಿಧಿ ಅವರು 'ಮಿಸ್ ಮ್ಯಾಚ್' ಚಿತ್ರವನ್ನು ನಿರ್ದೇಶಿಸುವ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ್ದಾರೆ. ಮಲೆನಾಡಿನ ಸೊಗಡಿನಲ್ಲಿ ಮೂಡಿಬಂದಿರುವ ಒಂದು ಫೀಲ್‌ಗುಡ್ ಫ್ಯಾಮಿಲಿ ರೊಮ್ಯಾಂಟಿಕ್ ಕಾಮಿಡಿ ಕಥಾಹಂದರ ಹೊಂದಿರುವ ಈ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಮಲೆನಾಡ ಭಾಗದಲ್ಲೇ ಹೆಚ್ಚಿನ ಚಿತ್ರೀಕರಣ ನಡೆದಿದೆ. ಪೋಸ್ಟ್ ಪ್ರೊಡಕ್ಷನ್ ವರ್ಕ್ ಬಿರುಸಿನಿಂದ ಸಾಗಿದೆ. ಇತ್ತೀಚೆಗೆ ಚಿತ್ರದ ಟೀಸರ್ ಬಿಡುಗಡೆಯಾಗಿದ್ದು ಭಾರಿ ಕುತೂಹಲ ಮೂಡಿಸಿದೆ. ಅಧಿಕ ಸಂಖ್ಯೆಯಲ್ಲಿ ವೀಕ್ಷಣೆಯೂ ಆಗುತ್ತಿದೆ. 'ಬಿ.ಟಿ.ಎಸ್' ಚಿತ್ರದಲ್ಲಿ ಮುಖ್ಯಪಾತ್ರ ನಿರ್ವಹಿಸಿದ್ದ ಕೌಶಿಕ್ ಹೆಗ್ಡೆ ಈ ಚಿತ್ರದ ನಾಯಕನಾಗಿ, 'ಕಂಬ್ಳಿಹುಳ' ಸೇರಿದಂತೆ ಕೆಲವು ಚಿತ್ರಗಳಲ್ಲಿ ನಟಿಸಿರುವ ಅಶ್ವಿತಾ ಹೆಗ್ಡೆ ನಾಯಕಿಯಾಗಿ ನಟಿಸಿರುವ ಈ ಚಿತ್ರದ ತಾರಾಬಳಗದಲ್ಲಿ 'ವಿಡಿಯೋ' ಖ್ಯಾತಿಯ ತೇಜಸ್, ಅಮೃತಾ, ಅನಿರುದ್ಧ್ ಆಚಾರ್ಯ, ನಾಗೇಂದ್ರ ಶಾ, ಲಕ್ಷ್ಮೀ ಸಿದ್ದಯ್ಯ ಮುಂತಾದವರಿದ್ದಾರೆ. ಸಾಯಿ ಶ್ರೀನಿಧಿ ಅವರೆ ಕಥೆ, ಚಿತ್ರಕಥೆ, ಬರೆದು ನಿರ್ದೇಶಿಸಿರುವ ಈ ಚಿತ್ರಕ್ಕೆ ಜುಡಾ ಸ್ಯಾಂಡಿ ಸಂಗೀತ ಸಂಯೋಜನೆ ಮಾಡಿದ್ದಾರೆ. ನಾಲ್ಕು ಹಾಡುಗಳಿದ್ದು ಮೂರು ಹಾಡುಗಳನ್ನು ಜೂಡಾ ಸ್ಯಾಂಡಿ ಅವರೆ ಹಾಡಿದ್ದಾರೆ. ಒಂದು ಹಾಡಿಗೆ ಲಕ್ಷ್ಮೀ ಬೆಳ್ಮಣ್ಣು ಧ್ವನಿಯಾಗಿದ್ದಾರೆ. ಗಣೇಶ್ ಮಹಾಬಲ ಛಾಯಾಗ್ರಹಣ ಹಾಗೂ ದೀಪಕ್ ಕುಲಾಲ್ ಸಂಕಲನ ಮಾಡಿದ್ದಾರೆ. ತೇಜಸ್ ವೆಂಕಟೇಶ್ ಅವರು ತೇಜಸ್ ಪಬ್ಲಿಕೇಶನ್ ಮತ್ತು ಸಟಾಯರ್ ಸಂಸ್ಥೆ ಮುಖೇನ 'ಮಿಸ್ ಮ್ಯಾಚ್' ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಮೇಘನಾ ಸಣ್ಣ ಊರಿನ ಸಂಕುಚಿತ ಮನೋಭಾವದ ಬದುಕಿನಿಂದ ಹೊರಬಂದು ನಗರದಲ್ಲಿ ಸ್ವತಂತ್ರವಾಗಿ ಬದುಕಬೇಕು ಎಂಬ ಕನಸು ಕಾಣುತ್ತಿರುವ ಹುಡುಗಿ.



## 'ಬೇಲ್' ಅಕ್ಟೋಬರ್ 2ರಂದು ಗ್ರ್ಯಾಂಡ್ ರಿಲೀಸ್

ಕೆವಿಎನ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ವೆಂಕಟ್ ಕೆ. ನಾರಾಯಣ ನಿರ್ಮಿಸಿರುವ, ಪವನ್ ಒಡೆಯರ್ ನಿರ್ದೇಶನದ ಬಹುನಿರೀಕ್ಷಿತ 'ಬೇಲ್' ಚಿತ್ರದ 'ಶಿವಣ್ಣ ಅಂಥೆಮ್' ಲಿರಿಕಲ್ ಸಾಂಗ್ ಅದ್ದೂರಿಯಾಗಿ ಬಿಡುಗಡೆಯಾಗಿದೆ. ಸಾಂಗ್ ರಿಲೀಸ್ ಸಮಾರಂಭದಲ್ಲಿ ನಾಯಕ ನಟ ಶಿವರಾಜ್‌ಕುಮಾರ್ ಹಾಗೂ ನಿರ್ದೇಶಕ ಪವನ್ ಒಡೆಯರ್ ತಮ್ಮ ವೈಯಕ್ತಿಕ ಬದುಕಿನ ನೋವು–ಸವಾಲುಗಳು ಹಾಗೂ ಚಿತ್ರೀಕರಣದ ದಿನಗಳ ಭಾವನಾತ್ಮಕ ಅನುಭವಗಳನ್ನು ಹಂಚಿಕೊಂಡಿದ್ದಾರೆ. ವೇದಿಕೆಯಲ್ಲಿ ಮಾತನಾಡಿದ ಶಿವರಾಜ್‌ಕುಮಾರ್, ತಾವು ಚಿಕಿತ್ಸೆ ಪಡೆಯುತ್ತಿದ್ದ ಕಠಿಣ ದಿನಗಳನ್ನು ಮೆಲುಕು ಹಾಕಿದರು. 'ನಾನು ಕೊನೆಯ ಹಂತದ ಕೀಮೋಥೆರಪಿಗೆ ಒಳಗಾಗುತ್ತಿದ್ದ ಸಂದರ್ಭದಲ್ಲಿ ನಿರ್ದೇಶಕ ಪವನ್ ಹಾಗೂ ಅವರ ಪತ್ನಿ ಅಪೇಕ್ಷಾ ಭೇಟಿ ನೀಡಿ ಕಥೆ ಹೇಳಿದ್ದರು. ಕೀಮೋಥೆರಪಿ ವೇಳೆ ಸಾಮಾನ್ಯವಾಗಿ ಕೂದಲು ಉದುರುತ್ತದೆ, ಅಷ್ಟು ಪ್ರಬಲ ಡೋಸ್ ನೀಡಿದ್ದರೂ ದೇವರ ದಯೆಯಿಂದ ನನಗೆ ಒಂದೇ ಒಂದು ಕೂದಲು ಕೂಡ ಉದುರಲಿಲ್ಲ. 64 ವರ್ಷದವರೆಗೆ ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದ ಕೂದಲನ್ನು ನೋಡಿ ಬೇರೆಯವರು ಮರುಗಬಾರದು ಎಂಬ ಆತಂಕವಿತ್ತು. ಚಿಕಿತ್ಸೆಯ ಆ ಕಷ್ಟದ ವೇಳೆಯಲ್ಲೂ ಪವನ್ ದಂಪತಿ ಬಂದು ಪ್ರೀತಿಯಿಂದ ಅಡ್ವಾನ್ಸ್ ನೀಡಿ ಸಿನಿಮಾ ಒಪ್ಪಿಸಿದರು. ಅವರ ನಂಬಿಕೆ ಕಂಡು ನಾನು ಹಾಗೂ ಪತ್ನಿ ಗೀತಾ ಭಾವುಕರಾಗಿ ಕಣ್ಣೀರಿಟ್ಟಿದ್ದೆವು" ಎಂದು ಶಿವಣ್ಣ ಹೇಳಿದರು. ಚಿತ್ರದ ಪಾತ್ರವರ್ಗದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಶಿವಣ್ಣ, "ಇದು ಕೇವಲ ಒಬ್ಬ ವ್ಯಕ್ತಿಯ ಶೋ ಅಲ್ಲ, ಎಲ್ಲ ಪಾತ್ರಗಳು ಚಿತ್ರಕಥೆಗೆ ಜೀವ ತುಂಬಿವೆ. ದೀಕ್ಷಿತ್ ಅತ್ಯುತ್ತಮ ಡ್ಯಾನ್ಸರ್ ಮತ್ತು ಹ್ಯಾಂಡ್‌ಸಮ್ ನಟ. ಸಂಜನಾ ಉತ್ತಮ ಅಭಿನಯ ನೀಡಿದ್ದಾರೆ. ಇನ್ನು 'ದುನಿಯಾ' ಚಿತ್ರದಿಂದಲೂ ನಾನು ಲೂಸ್‌ಮಾದ ಯೋಗಿಗೆ ಅಭಿಮಾನಿಯಾಗಿದ್ದು, ಅವರೊಂದಿಗೆ ತೆರೆ ಹಂಚಿಕೊಂಡಿದ್ದು ಖುಷಿ ನೀಡಿದೆ. ವಯಸ್ಸಾಗುವುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು, 64ವರ್ಷವಾದರೂ ಕೆಲಸ ಮಾಡುವ ಸಕಾರಾತ್ಮಕ ಮನೋಭಾವ ನಮ್ಮಲ್ಲಿರಬೇಕು. ಇದೊಂದು ಉತ್ತಮ ಸಿನಿಮಾವಾಗಲಿದೆ" ಎಂದರು. ನಿರ್ದೇಶಕ ಪವನ್ ಒಡೆಯರ್ ಮಾತನಾಡಿ, 'ಕ್ರಿಕೆಟ್ ಟೂರ್ನಮೆಂಟ್ ಆಕ್ಷನ್ ವೇಳೆ ಶಿವಣ್ಣನಿಗೆ ಕ್ಯಾನ್ಸರ್ ಆಗಿದೆ ಎಂಬ ಸುದ್ದಿ ಕೇಳಿ ದಿಗ್ಭ್ರಮೆಗೊಂಡಿದ್ದೆ ಎಂದರು.




## 'ಡಾಲಿ' ಧನಂಜಯ್ ನಟನೆಯ 'ಅಣ್ಣ ಫ್ರಮ್ ಮೆಕ್ಸಿಕೋ' ಹಾಡಿಗೆ ಭರ್ಜರಿ ರೆಸ್ಪಾನ್ಸ್!

ಡಾಲಿ ಧನಂಜಯ್ ನಟನೆಯ ಬಹುನಿರೀಕ್ಷಿತ ಚಿತ್ರ 'ಅಣ್ಣ ಫ್ರಮ್ ಮೆಕ್ಸಿಕೋ' ಬಿಡುಗಡೆಗೂ ಮುನ್ನವೇ ಹಾಡುಗಳ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ಭಾರಿ ಸಂಚಲನ ಸೃಷ್ಟಿಸಿದೆ. ಚಿತ್ರದ 'ಓ ಪುಟ್ಟಮಲ್ಲಿ ನೀ ಕೇಳು ಇಲ್ಲಿ' ಎಂಬ ಮಾಸ್ ಡ್ಯಾನ್ಸ್ ನಂಬರ್ ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಯೂಟ್ಯೂಬ್‌ನಲ್ಲಿ ಬರೋಬ್ಬರಿ 5 ಮಿಲಿಯನ್ (50 ಲಕ್ಷ) ವೀಕ್ಷಣೆಗಳ ಗಡಿ ತಲುಪುವ ಮೂಲಕ ಧೂಳೆಬ್ಬಿಸುತ್ತಿದೆ. ಕೇವಲ ಯೂಟ್ಯೂಬ್ ಅಷ್ಟೇ ಅಲ್ಲದೆ, ಸೋಶಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್ ಇನ್‌ಸ್ಟಾಗ್ರಾಮ್‌ನಲ್ಲೂ ಈ ಹಾಡು ಹೊಸ ದಾಖಲೆ ಬರೆದಿದ್ದು, ಈಗಾಗಲೇ 50 ಸಾವಿರಕ್ಕೂ ಅಧಿಕ ರೀಲ್ಸ್‌ಗಳು ಈ ಟ್ಯೂನ್‌ಗೆ ಹರಿದುಬಂದಿವೆ. 'ಎಕ್ಕ' ಚಿತ್ರದ 'ಬ್ಯಾಂಗಲ್ ಬಂಗಾರಿ' ಹಾಡಿನ ಯಶಸ್ಸಿನ ಬಳಿಕ, ಮತ್ತೊಂದು ಬಿಗ್ಗೆಸ್ಟ್ ಚಾರ್ಟ್‌ಬಸ್ಟರ್ ಸಾಂಗ್ ಆಗಿ 'ಓ ಪುಟ್ಟಮಲ್ಲಿ' ಹೊರಹೊಮ್ಮಿದೆ. ವಾಸುಕಿ ವೈಭವ್ ಅವರ ಮಾಸ್ ಬೀಟ್ಸ್‌ಗೆ ನಿರ್ದೇಶಕ ಚೇತನ್ ಕುಮಾರ್ ಪೆನ್ನಿನಿಂದ ಸಾಹಿತ್ಯ ಮೂಡಿಬಂದಿದ್ದು, ಖ್ಯಾತ ಗಾಯಕ ಸಂಜಿತ್ ಹೆಗ್ಡೆ ತಮ್ಮ ವಿಶಿಷ್ಟ ಕಂಠದಲ್ಲಿ ಈ ಹಾಡನ್ನು ಅದ್ಭುತವಾಗಿ ಹಾಡಿದ್ದಾರೆ. ಧನಂಜಯ್ ಅವರ ಇತ್ತೀಚಿನ ಕರಿಯರ್‌ನಲ್ಲೇ ಒಂದು ಪಕ್ಕಾ ಕಮರ್ಷಿಯಲ್ ಡ್ಯಾನ್ಸ್ ನಂಬರ್ ಇದಾಗಿದ್ದು, ನಾಯಕಿ ರೀಷ್ಮಾ ನಾಣಯ್ಯ ಜೊತೆಗೂಡಿ ಡಾಲಿ ಹೆಜ್ಜೆ ಹಾಕಿರುವ ರೀತಿ ಅಭಿಮಾನಿಗಳಿಗೆ ಸಖತ್ ಕಿಕ್ ಕೊಟ್ಟಿದೆ. ಭೂಷಣ್ ಮಾಸ್ಟರ್ ಕೋರಿಯೋಗ್ರಫಿ ಮಾಡಿರೋ ಈ ಹಾಡು ರಿಯಾಲಿಟಿ ಷೋಗಳಲ್ಲಿ ಫೇವರೇಟ್ ಆಗಿದೆ. ಇವರಿಬ್ಬರ ಸ್ಟೆಪ್ಸ್ ಹಾಗೂ ಎನರ್ಜಿ ಈ ಹಾಡನ್ನು ಸಿನಿಮಾಗೆ ದೊಡ್ಡ ಮಟ್ಟದ ಮೈಲೇಜ್ ತಂದುಕೊಡುವಂತೆ ಮಾಡಿದೆ.



## 'ಆರ್‌ಎಕ್ಸ್ 100' ಹೀರೋ ಕಾರ್ತಿಕೇಯ ಟಾಲಿವುಡ್‌ಗೆ

ತೆಲುಗು ನಟ ಕಾರ್ತಿಕೇಯ ಗುಮ್ಮಕೊಂಡ ತಮ್ಮ ಹೊಸ ಚಿತ್ರ 'ಕಮ್‌ಬ್ಯಾಕ್' ಮೂಲಕ ಮರಳಿ ಪ್ರೇಕ್ಷಕರ ಮುಂದೆ ಬರುತ್ತಿದ್ದಾರೆ. ತಮ್ಮ ಹುಟ್ಟುಹಬ್ಬದ ಅಂಗವಾಗಿ ವಿಶೇಷ ಗ್ಲಿಂಪ್ಸ್ ಬಿಡುಗಡೆ ಮಾಡುವ ಮೂಲಕ ಅಧಿಕೃತವಾಗಿ ಹೊಸ ಸಿನಿಮಾ ಘೋಷಿಸಿದ್ದಾರೆ. ತಮ್ಮದೇ ಸಂಸ್ಥೆಯಾದ 'ಕಾರ್ತಿಕೇಯ ಕ್ರಿಯೇಟಿವ್ ವರ್ಕ್ಸ್' ಬ್ಯಾನರ್ ಅಡಿಯಲ್ಲಿ ಈ ಪ್ರಕಟಣೆ ಹೊರಬಿದ್ದಿದ್ದು, ಇದರಲ್ಲಿ ಕಾರ್ತಿಕೇಯ ಕೇವಲ ನಾಯಕನಾಗಿ ಮಾತ್ರವಲ್ಲದೆ ನಿರ್ದೇಶಕನಾಗಿಯೂ ಕೆಲಸ ಮಾಡಲಿದ್ದಾರೆ. ಚಿತ್ರರಂಗದಿಂದ ಕೆಲಕಾಲ ದೂರವಿದ್ದ ನಂತರ ನಿರ್ದೇಶಕರಾಗಿ ಅವರು 'ಕಮ್‌ಬ್ಯಾಕ್' ಮಾಡಿರುವುದು ಸಿನಿಮಾದ ಮೇಲಿನ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚಿಸಿದೆ. ಅವರ ಪತ್ನಿ ಲೋಹಿತಾ ರೆಡ್ಡಿ ಈ ಚಿತ್ರಕ್ಕೆ ನಿರ್ಮಾಪಕಿಯಾಗಿದ್ದು, ಇಡೀ ಕುಟುಂಬವೇ ಜೊತೆಗೂಡಿ ನಿರ್ಮಿಸುತ್ತಿರುವ ಈ ಸಿನಿಮಾ 2027ರಲ್ಲಿ ತೆರೆಗೆ ಬರಲಿದೆ. ಬಿಡುಗಡೆಯಾಗಿರುವ ಗ್ಲಿಂಪ್ಸ್‌ನಲ್ಲಿ ಬರುವ ಹಿನ್ನೆಲೆ ಧ್ವನಿಯು, ಮೂರು ವರ್ಷಗಳಿಂದ ಯಾವುದೇ ಸದ್ದಿಲ್ಲದೆ ಕಣ್ಮರೆಯಾಗಿರುವ ಬಾಕ್ಸರ್ ಒಬ್ಬನ ಸುತ್ತ ಕಥೆಯನ್ನು ಕಟ್ಟಿಕೊಡುತ್ತದೆ. ಈ ಬಾಕ್ಸರ್ ಪಾತ್ರದಲ್ಲಿ ಕಾರ್ತಿಕೇಯ ಕಾಣಿಸಿಕೊಂಡಿದ್ದಾರೆ. ನಾಯಕನನ್ನು ಹಲವರು ಈಗಾಗಲೇ ಮರೆತುಬಿಟ್ಟಿದ್ದಾರೆ ಎಂಬ ಆರಂಭಿಕ ಸುಳಿವುಗಳು ಇದರಲ್ಲಿ ಸಿಗುತ್ತವೆ. ಇಷ್ಟು ಸುದೀರ್ಘ ಮೌನದ ನಂತರದ ಈ ಮರಳುವಿಕೆ ಏನನ್ನು ಸಾಧಿಸಬಹುದು ಎಂಬ ಪ್ರಶ್ನೆಗಳು ಮೂಡುತ್ತವೆ. ಅಲ್ಲದೆ, ನಡುವಿನ ಆ ವರ್ಷಗಳಲ್ಲಿ ಏನಾಯಿತು ಎಂಬುದು ನಿಗೂಢವಾಗಿಯೇ ಇರುವುದರಿಂದ ಈ ಹೆಜ್ಜೆಯು ಸ್ಪಷ್ಟವಾಗಿ ರಿಸ್ಕ್‌ನಿಂದ ಕೂಡಿದೆ.



## ಜಾರ್ಖಂಡ್ ಚಿತ್ರೋತ್ಸವಕ್ಕೆ 'ಮಹಾಕವಿ'

ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ಮಹಾಕವಿ' ಕನ್ನಡ ಚಿತ್ರವು ಜಾರ್ಖಂಡ್ ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೆ ಆಯ್ಕೆಯಾಗಿದೆ. ಈ ಚಿತ್ರವನ್ನು ಬೆಳಗಾವಿಯ ಪ್ರಭು ಯತ್ನಟ್ಟಿಯವರು ತಮ್ಮ ಪಿ.ಆರ್ ಅಸೋಸಿಯೇಟ್ಸ್ ಸಂಸ್ಥೆಯಿಂದ ನಿರ್ಮಿಸಿದ್ದಾರೆ. ಈ ಚಿತ್ರೋತ್ಸವವು ಅಕ್ಟೋಬರ್ ಕೊನೆಯ ವಾರದಲ್ಲಿ ನಡೆಯಲಿದೆ. 'ಮಹಾಕವಿ' ಚಿತ್ರವು ಕನ್ನಡದ ಆದಿಕವಿಯೆಂದೇ ಪ್ರಸಿದ್ಧವಾದ ಪಂಪನ ಜೀವನ ಹಾಗೂ ಕಾವ್ಯಗಳ ಆಶಯಗಳನ್ನು ಆಧರಿಸಿ ರೂಪುಗೊಂಡಿದೆ. ಪಂಪಕವಿಯ ಆದಿಪುರಾಣಂ ಮತ್ತು ವಿಕ್ರಮಾರ್ಜುನ ವಿಜಯಂ ಎಂಬ ಎರಡು ಕಾವ್ಯಗಳಲ್ಲಿರುವ ಮತ್ತು ಸಮಕಾಲೀನ ಪ್ರಸ್ತುತತೆಯನ್ನು ಹೊಂದಿರುವ ಸನ್ನಿವೇಶಗಳನ್ನು 'ಮಹಾಕವಿ' ಚಿತ್ರವು ಅಳವಡಿಸಿಕೊಂಡಿದೆ. ಜಾತಿ ತಾರತಮ್ಯ ವಿರೋಧಿ ಮತ್ತು ಯುದ್ಧವಿರೋಧಿ ನಿಲುವಿನ ಜೊತೆಗೆ ಸೃಜನಶೀಲ ಸ್ವಾತಂತ್ರ್ಯದ ಸಮಸ್ಯೆಯನ್ನು ಚಿತ್ರಿಸಲಾಗಿದೆ. ಬರಗೂರರೇ ಚಿತ್ರಕತೆ, ಸಂಭಾಷಣೆ ಬರೆದು ನಿರ್ದೇಶಿಸಿರುವ ಈ ಚಿತ್ರದಲ್ಲಿ ಬಹುಭಾಷಾಕಲಾವಿದ ಕಿಶೋರ್, ಅನುಷಾರೈ, ಸುಂದರರಾಜ್ ಕುಮಾರ್‌ಗೋವಿಂದ್, ಪ್ರಮೀಳಾಜೋಷಾಯ್, ಅಕಾಂಶ್‌ಬರಗೂರ್, ಅರಸು, ದಳವಾಯಿ, ಶಾಂತರಾಜು ಮುಂತಾದವರು ಅಭಿನಯಿಸಿದ್ದಾರೆ.



## 'ಸ್ಲಮ್ ಡಾಗ್' ಚಿತ್ರದಿಂದ ಎಮೋಷನಲ್ ಗ್ಲಿಂಪ್ಸ್ ರಿಲೀಸ್

ಡೈನಾಮಿಕ್ ನಿರ್ದೇಶಕ ಪೂರಿ ಜಗನ್ನಾಥ್ ಮತ್ತು ವಿಶಿಷ್ಟ ನಟ ವಿಜಯ್ ಸೇತುಪತಿ ಕಾಂಬಿನೇಷನ್‌ನಲ್ಲಿ ಸಿದ್ಧವಾಗುತ್ತಿರುವ ಬಹುನಿರೀಕ್ಷಿತ ಪ್ಯಾನ್-ಇಂಡಿಯಾ ಚಿತ್ರ 'ಸ್ಲಮ್ ಡಾಗ್: 33 ಟೆಂಪಲ್ ರೋಡ್' ಕುತೂಹಲ ಮೂಡಿಸಿದೆ. ಜೆಬಿ ಮೋಷನ್ ಪಿಕ್ಚರ್ಸ್‌ನ ಜೆಬಿ ನಾರಾಯಣ ರಾವ್ ಕೊಂಡ್ರೊಲ್ಲಾ ಅವರ ಸಹಯೋಗದೊಂದಿಗೆ ಪೂರಿ ಕನೆಕ್ಟ್ ಬ್ಯಾನರ್ ಅಡಿಯಲ್ಲಿ ಪೂರಿ ಜಗನ್ನಾಥ್ ಹಾಗೂ ಚಾರ್ಮಿ ಕೌರ್ ನಿರ್ಮಿಸುತ್ತಿರುವ ಈ ಚಿತ್ರದ ಹೊಸ ಗ್ಲಿಂಪ್ಸ್ ಬಿಡುಗಡೆಯಾಗಿದೆ. ಇತ್ತೀಚೆಗಷ್ಟೇ ಚಿತ್ರದಲ್ಲಿ ಪವರ್‌ಫುಲ್ ಪೊಲೀಸ್ ಅಧಿಕಾರಿಯಾಗಿ ನಟಿಸಿರುವ ಖ್ಯಾತ ನಟಿ ಟಬು ಅವರ ಲುಕ್ ಗ್ಲಿಂಪ್ಸ್‌ಗೆ ಭರ್ಜರಿ ಮೆಚ್ಚುಗೆ ವ್ಯಕ್ತವಾಗಿದ್ದ ಬೆನ್ನಲ್ಲೇ, ಇದೀಗ ವಿಜಯ್ ಸೇತುಪತಿಯವರ ತಾಯಿ 'ಜುಬೇದಾ' ಪಾತ್ರವನ್ನು ಪ್ರೇಕ್ಷಕರಿಗೆ ಪರಿಚಯಿಸಲಾಗಿದೆ. ಚಿತ್ರದಲ್ಲಿ ತಾಯಿಯ ಪಾತ್ರಕ್ಕೆ ಹಿರಿಯ ನಟಿ ಝುರೀನಾ ವಹಾಬ್ ಜೀವ ತುಂಬಿದ್ದು, ಬಿಡುಗಡೆಯಾಗಿರುವ ಗ್ಲಿಂಪ್ಸ್ ಅತ್ಯಂತ ಭಾವನಾತ್ಮಕವಾಗಿ ಮೂಡಿಬಂದಿದೆ.



## "ಬೃಂದಾವಿಹಾರಿ" ಚಿತ್ರದ ಐದನೇ ಹಾಡು ಅನಾವರಣ

ಸಮೃದ್ಧಿ ಮಂಜುನಾಥ್ ನಿರ್ಮಾಣದ ಗೋಲ್ಡನ್ ಮೆಗಾ ಸ್ಟಾರ್ ಗಣೇಶ್ ನಾಯಕರಾಗಿ ನಟಿಸಿರುವ ಹಾಗೂ ಶ್ರೀನಿವಾಸರಾಜು ನಿರ್ದೇಶನದ 'ಬೃಂದಾವಿಹಾರಿ' ಚಿತ್ರದ ಐದನೇ ಹಾಡು 'ಒಂದೇ ಒಂದು' ಇತ್ತೀಚಿಗೆ ಬೆಂಗಳೂರಿನ ಅರಮನೆ ಆವರಣದಲ್ಲಿ ಅದ್ದೂರಿಯಾಗಿ ಅನಾವರಣವಾಯಿತು. ನಿರ್ಮಾಪಕ ಸಮೃದ್ಧಿ ಮಂಜುನಾಥ್ ಅವರ ಪತ್ನಿ ಪದ್ಮ ಮಂಜುನಾಥ್ ಅವರು ಈ ಹಾಡನ್ನು ಬಿಡುಗಡೆ ಮಾಡಿದರು. ಕವಿರತ್ನ ಡಾ||ವಿ.ನಾಗೇಂದ್ರಪ್ರಸಾದ್ ಬರೆದಿರುವ ಈ ಹಾಡನ್ನು ಹೆಸರಾಂತ ಗಾಯಕಿ ಕೆ.ಎಸ್ ಚಿತ್ರ ಹಾಗೂ ಖ್ಯಾತ ಗಾಯಕ ಜಸ್ಕರಣ್ ಸಿಂಗ್ ಹಾಡಿದ್ದಾರೆ. ಹೇಶಮ್ ಅಬ್ದುಲ್ ವಹಾಬ್ ಸಂಗೀತ ನೀಡಿರುವ ಈ ಹಾಡಿಗೆ ಗಣೇಶ್ ಹಾಗೂ ದೇವಿಕ ಭಟ್ ಹೆಜ್ಜೆ ಹಾಕಿದ್ದಾರೆ. ಈಗಾಗಲೇ ಬಿಡುಗಡೆಯಾಗಿರುವ ಈ ಚಿತ್ರದ ನಾಲ್ಕು ಹಾಡುಗಳು ಸೂಪರ್ ಹಿಟ್ ಆಗಿದ್ದು, ಐದನೇ ಹಾಡಾಗಿ ಬಿಡುಗಡೆಯಾಗಿರುವ 'ಒಂದೇ ಒಂದು' ಎಲ್ಲರ ಮನ ಗೆಲ್ಲುತ್ತಿದೆ. ಆನಂದ್ ಆಡಿಯೋ ಮೂಲಕ ಈ ಚಿತ್ರದ ಹಾಡುಗಳು ಬಿಡುಗಡೆಯಾಗಿದೆ. ಅಕ್ಟೋಬರ್16 ನಾಡಹಬ್ಬ ದಸರಾ ಸಂದರ್ಭದಲ್ಲಿ ಈ ಚಿತ್ರ ತೆರೆಗೆ ಬರಲಿದೆ.



## ಶ್ರೀವಿನಾಯಕ ದೇವಸ್ಥಾನದಲ್ಲಿ 'ಬ್ಯಾಂಗಲ್ ಬಂಗಾರಿ'

ಯುವ ರಾಜಕುಮಾರ್ ಅಭಿನಯದ 'ಎಕ್ಕಾ' ಚಿತ್ರದ 'ಬ್ಯಾಂಗಲ್ ಬಂಗಾರಿ' ತುಂಬಾ ಜನಪ್ರಿಯವಾದ ಹಾಡು. ಈಗ ಆ ಹಾಡಿನ ಮೊದಲ ಸಾಲೇ ಚಿತ್ರದ ಶೀರ್ಷಿಕೆಯಾಗಿದೆ. ಹೌದು. ಶಂಕರ್ ರಾಮರೆಡ್ಡಿ ನಿರ್ಮಿಸಿ, ಮರಡಿಹಳ್ಳಿ ಚಂದ್ರನಾಗ್ ನಿರ್ದೇಶಿಸುತ್ತಿರುವ ನೂತನ ಚಿತ್ರಕ್ಕೆ 'ಬ್ಯಾಂಗಲ್ ಬಂಗಾರಿ' ಎಂದು ಹೆಸರಿಡಲಾಗಿದೆ. ಇತ್ತೀಚೆಗೆ ಈ ಚಿತ್ರದ ಮುಹೂರ್ತ ಸಮಾರಂಭ ನಂದಿನಿ ಬಡಾವಣೆಯ ಬಲಮುರಿ ಪ್ರಸಿದ್ಧಿ ಶ್ರೀವಿನಾಯಕ ದೇವಸ್ಥಾನದಲ್ಲಿ ನೆರವೇರಿತು. 'ಮುಂಗಾರು ಮಳೆ' ಚಿತ್ರದ ನಿರ್ಮಾಪಕರಾದ ಇ.ಕೃಷ್ಣಪ್ಪ ಅವರು ಮೊದಲ ಸನ್ನಿವೇಶಕ್ಕೆ ಆರಂಭ ಫಲಕ ತೋರಿದರು. ಶಾಸಕ ಗೋಪಲಯ್ಯ ಅವರು ಕ್ಯಾಮೆರಾ ಚಾಲನೆ ಮಾಡಿದರು. ಇಬ್ಬರು ಗಣ್ಯರು ಚಿತ್ರ ಯಶಸ್ವಿಯಾಗಲೆಂದು ಹಾರೈಸಿದರು ನಂತರ ಚಿತ್ರತಂಡದ ಸದಸ್ಯರು ಮಾತನಾಡಿದರು. ಶುಕ್ರವಾರ, ಅನಂತ ಚತುರ್ದಶಿಯ ಶುಭದಿನ ನಮ್ಮ 'ಬ್ಯಾಂಗಲ್ ಬಂಗಾರಿ' ಚಿತ್ರಕ್ಕೆ ಚಾಲನೆ ಸಿಕ್ಕಿದೆ. ಸುನೀಲ್ ಶಶಿಧರ್, ಪ್ರಕೃತಿ ರಾಜೇಂದ್ರ ನಾಯಕ – ನಾಯಕಿಯಾಗಿ ನಟಿಸುತ್ತಿದ್ದಾರೆ.



## ಲಂಕಾಧಿಪತಿಯ ಅವತಾರದಲ್ಲಿ ರಾಕಿಂಗ್ ಲುಕ್

ಭಾರತೀಯ ಚಿತ್ರರಂಗದ ಅತ್ಯಂತ ನಿರೀಕ್ಷಿತ ಬೃಹತ್ ದೃಶ್ಯಕಾವ್ಯ 'ರಾಮಾಯಣ' ಸಿನಿಮಾ. ಇದೀಗ ಇದೇ ಚಿತ್ರತಂಡ ರಾಕಿಂಗ್ ಸ್ಟಾರ್ ಯಶ್ ಅವರ 'ರಾವಣ' ಪಾತ್ರದ ಮೊದಲ ಅಧಿಕೃತ ಪೋಸ್ಟರ್ ಅನ್ನು ಬಿಡುಗಡೆ ಮಾಡಿದೆ. ಈ ಪೋಸ್ಟರ್‌ನಲ್ಲಿ ಯಶ್ ಅತ್ಯಂತ ಗಂಭೀರ ಹಾಗೂ ಶಕ್ತಿಯುತ ಅವತಾರದಲ್ಲಿ ಕಾಣಿಸಿಕೊಂಡಿದ್ದು, ಪ್ರೇಕ್ಷಕರಲ್ಲಿ ಚಿತ್ರದ ಮೇಲಿನ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚಿಸಿದೆ. ಚಿತ್ರದ ಟ್ರೇಲರ್ ಬಿಡುಗಡೆಯಾದಾಗಿನಿಂದಲೂ ಯಶ್ ಅವರ ರಾವಣನ ಪಾತ್ರವು ಅಪಾರ ಕುತೂಹಲ ಮೂಡಿಸಿತ್ತು. ತಮ್ಮ ಮೊದಲ ನೋಟದಲ್ಲೇ ತೀವ್ರತೆ ಹಾಗೂ ಪ್ರಭಾವಶಾಲಿ ವ್ಯಕ್ತಿತ್ವದಿಂದ ಪ್ರೇಕ್ಷಕರ ಗಮನ ಸೆಳೆದಿದ್ದ ಯಶ್, ಇದೀಗ ಬಿಡುಗಡೆಯಾಗಿರುವ ಪೋಸ್ಟರ್‌ನಲ್ಲಿ ರಾಜಗಾಂಭೀರ್ಯದೊಂದಿಗೆ ವಿಜೃಂಭಿಸಿದ್ದಾರೆ. ಹೊಸ ಪೋಸ್ಟರ್‌ನಲ್ಲಿ ಯಶ್ ರತ್ನಖಚಿತವಾದ ಹೊಳೆಯುವ ಚಿನ್ನದ ಕಿರೀಟ, ಮುತ್ತಿನ ಹಾರಗಳು ಹಾಗೂ ಭಾರವಾದ ಚಿನ್ನದ ಬಳೆಗಳನ್ನು ಧರಿಸಿ ಕಂಗೊಳಿಸುತ್ತಿದ್ದಾರೆ. ಅವರ ತೀವ್ರ ನೋಟ ಮತ್ತು ಗಂಭೀರ ಉಪಸ್ಥಿತಿಯು ಪ್ರೇಕ್ಷಕರನ್ನು ಆಕರ್ಷಿಸುತ್ತದೆ.



## ಚಿತ್ರರಂಗದ ಸುತ್ತ '18 ಎಕರೆ ಸಿನಿಮಾ ಲಕ್ಕಪ್ಪ'

ಈ ಹಿಂದೆ ಗಾಯತ್ರಿ, ಪ್ರೀತಿಯ ಹುಚ್ಚ ಚಿತ್ರಗಳನ್ನು ನಿರ್ದೇಶಿಸಿದ ವಿ.ಕುಮಾರ್ (ರಾಘವ ವಿನೋದ್ ಕುಮಾರ್) ಅವರೀಗ ಸದ್ದಿಲ್ಲದೆ ಮತ್ತೊಂದು ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುವ ಪ್ರಯತ್ನದಲ್ಲಿದ್ದಾರೆ. ಆ ಚಿತ್ರದ ಹೆಸರು '18 ಎಕ್ರೆ ಸಿನಿಮಾ ಲಕ್ಕಪ್ಪ'. ಚಿತ್ರರಂಗದಲ್ಲಿ ತೆರೆಯ ಹಿಂದೆ ನಡೆಯುವ ಒಂದಷ್ಟು ಸತ್ಯಘಟನೆಗಳನ್ನು ಈ ಸಿನಮಾ ಮೂಲಕ ಹೇಳಹೊರಟಿದ್ದಾರೆ. ಸಿನಿಮಾರಂಗಕ್ಕೆ ಹೊಸದಾಗಿ ಬರೋ ನಾಯಕ, ನಾಯಕಿಯರ ಅನುಭವಗಳು, ಪ್ರೊಡಕ್ಷನ್ ಅನುಭವ ಇಲ್ಲದೆ ಚಿತ್ರರಂಗಕ್ಕೆ ಬರುವ ನಿರ್ಮಾಪಕರರನ್ನು ಮ್ಯಾನೇಜರ್‌ಗಳು ಹೇಗೆಲ್ಲಾ ನಂಬಿಸಿ ಯಾಮಾರಿಸುತ್ತಾರೆ, ಕಲಾವಿದರಿಗೂ, ಜೀವನಕ್ಕೂ 'ಸಿನಿಮಾ' ಎನ್ನುವುದು ಕನ್ನಡಿ ಇದ್ದಹಾಗೆ ಎಂಬುದನ್ನು ಈ ಚಿತ್ರದ ಮೂಲಕ ಹೇಳೋ ಪ್ರಯತ್ನ ಮಾಡಿದ್ದಾರೆ. ಮಂಡ್ಯ, ಕೀಲಾರ, ಬೆಂಗಳೂರು, ಸಕಲೇಶಪುರ ಹಾಗೂ ಶ್ರವಣಬೆಳಗೊಳದ ಸುತ್ತಮುತ್ತ 45 ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಕುಮಾರ್ ಮೂವೀಸ್ ಅಡಿ ದಯಾನಂದ್ ಕೆ, ಸುಬ್ರಮಣಿ ರಾಮಗೊಂಡನಹಳ್ಳಿ ಅಲ್ಲದೆ ಒಂದಷ್ಟು ಸ್ನೇಹಿತರೇ ಸೇರಿ ಚಿತ್ರವನ್ನು ನಿರ್ಮಿಸಿದ್ದಾರೆ.






# ಸಿನಿಲೋಕದ ಧ್ರುವತಾರೆ ಕೆಂಪರಾಜ್ ಅರಸ್..



1940ರಲ್ಲಿ ಸಿನಿಪ್ರೇಕ್ಷಕರನ್ನು ಆಕರ್ಷಿಸಿದ ಒಬ್ಬ ಭಾರತೀಯ ನಟ, ನಿರ್ದೇಶಕ ಮತ್ತು ನಿರ್ಮಾಪಕ ಡಿ ಕೆಂಪರಾಜ್ ಅರಸ್. ಇವರು ಮುಖ್ಯವಾಗಿ ಕನ್ನಡ ಚಲನ ಚಿತ್ರೋದ್ಯಮದಲ್ಲಿ ಕೆಲಸ ಮಾಡಿದರೂ ಕೂಡ ಅಂದಿನ ಕಾಲದಲ್ಲೇ ಇವರ ಅಭಿನಯದ ಸಿನಿಮಾಗಳು ಕನ್ನಡದ ಜೊತೆ ಜೊತೆಗೆ ತಮಿಳು ಮತ್ತು ತೆಲುಗು ಭಾಷೆ ಗಳಲ್ಲೂ ತಯಾರಾಗುತ್ತಿದ್ದವು. 1940 ಮತ್ತು 1950ರ ದಶಕದಲ್ಲಿ ಕೆಂಪರಾಜ್ ಅರಸ್ ಅವರ ಚಲನಚಿತ್ರಗಳು ಪ್ರೇಕ್ಷಕರ ಮೇಲೆ ಪ್ರಭಾವ ಬೀರಿದವು ಎಂದು ಹೇಳಬಹುದು. ಕನ್ನಡ ಚಿತ್ರ ಜಗತ್ತಿಗೆ ಡಾ. ರಾಜ್‌ಕುಮಾರ್ ಪ್ರವೇಶಗಿಂತ ಮುಂಚೆಯೇ ಬೆಳ್ಳಿಪರದೆಯನ್ನು ಅಲಂಕರಿಸಿದವರಾಗಿದ್ದರು ಕೆಂಪರಾಜ್ ಅರಸ್. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ದೇವರಾಜ್ ಅರಸ್, ಕೆಂಪರಾಜ್ ಅರಸ್ ಅವರ ಹಿರಿಯ ಸಹೋದರರಾಗಿದ್ದರು. 1942ರಲ್ಲಿ ತೆರೆಕಂಡ 'ಜೀವನ ನಾಟಕ' ಚಿತ್ರದ ಮೂಲಕ ಚಿತ್ರ ಜಗತ್ತಿಗೆ ಪಾದರ್ಪಾಣೆ ಮಾಡಿದ್ದ ಕೆಂಪರಾಜ್ ಅರಸ್ ಮೈಸೂರಿನ ಹುಣಸೂರು ತಾಲೂಕಿನ ಕಲ್ಲಹಳ್ಳಿಯಲ್ಲಿ 1917ರ ಫೆಬ್ರವರಿ5 ರಂದು ಜನಿಸಿದರು. ಅವರು ಇಂಗ್ಲೀಷ್ ಸಾಹಿತ್ಯ ಓದುವ ಸಂದರ್ಭದಲ್ಲಿ ಗೆಳತಿಯಾಗಿದ್ದ ಲಲಿತಾ ಅವರನ್ನು ಪ್ರೀತಿಸಿ ವಿವಾಹವಾದರು. ಅಂತರ್ಜಾತಿಯ ವಿವಾಹವಾದ ಕಾರಣ ಅವರ ಕುಟುಂಬದಲ್ಲಿ ವಿರೋಧ ವ್ಯಕ್ತವಾದರೂ ಆ ನಂತರ ಅವರ ಸಹೋದರ ದೇವರಾಜ್ ಅರಸರ ಮಧ್ಯಸ್ಥಿಕೆಯಿಂದ ಸರಿ ಹೋಯಿತು. ಕೆಂಪರಾಜ್ ಅರಸ್ ಮತ್ತು




ಲಲಿತಾ ಜೋಡಿಗಳಿಗೆ ಮೂರು ಹೆಣ್ಣು ಮಕ್ಕಳು. ಕೆಂಪರಾಜ್ ಅರಸರು ವೈದ್ಯನಾಗಬೇಕೆಂಬ ಹಂಬಲ ಹೊಂದಿದ್ದರೂ ಮಹಾತ್ಮ ಗಾಂಧಿಯವರಿಂದ ಪ್ರೇರಿತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಜೈಲು ಪಾಲಾಗಿದ್ದರು. ಕೆಂಪರಾಜ್ ಅರಸ್ ಕನ್ನಡ ರಂಗಭೂಮಿಯ ಅರಸನಾದ ಗುಬ್ಬಿ ವೀರಣ್ಣ ಅವರನ್ನು ಭೇಟಿಯಾದರು. ಅಲ್ಲಿ ಅವರಿಗೆ ನಾಟಕಗಳಲ್ಲಿ ಅಭಿನಯಿಸಲು ಅವಕಾಶಗಳು ಸಿಕ್ಕಿತು. 1942ರಲ್ಲಿ, ಸ್ವತಂತ್ರ ನಿರ್ಮಾಪಕರಾಗಿ, ಗುಬ್ಬಿ ವೀರಣ್ಣ ಅವರು ತಮ್ಮ ಸ್ವಂತ ಬ್ಯಾನರ್ ಗುಬ್ಬಿ ಫಿಲಮ್ಸ್ ಅಡಿಯಲ್ಲಿ ತಮ್ಮ ಮೊದಲ ಚಲನಚಿತ್ರ 'ಜೀವನ ನಾಟಕ'ವನ್ನು ನಿರ್ಮಿಸಿದರು, ಶಾಂತಾ ಹುಬ್ಬಳ್ಳಿಕರ್ ಮತ್ತು ಎಂ.ವಿ. ರಾಜಮ್ಮ ಅವರೊಂದಿಗೆ ನಾಯಕರಾಗಿ ಕೆಂಪರಾಜ್ ಅರಸ್ ಅವರನ್ನು ಆಯ್ಕೆ ಮಾಡಿದರು. ರಂಗಭೂಮಿಯಿಂದ ಚಿತ್ರರಂಗ ಪ್ರವೇಶಿಸಿದ ಅರಸ್ 1947ರಲ್ಲಿ 'ಕೃಷ್ಣಲೀಲಾ' ಚಿತ್ರದಲ್ಲಿ ಕಂಸನ ಪಾತ್ರದಲ್ಲಿ ನಟಿಸಿ ಯಶಸ್ವಿಯಾದರು. 1948ರಲ್ಲಿ ಡಿ ಶಂಕರ್ ಸಿಂಗ್ ನಿರ್ಮಾಣದಲ್ಲಿ ತಯರಾದ 'ಭಕ್ತ ರಾಮದಾಸ್' ಚಿತ್ರವನ್ನು ನಿರ್ದೇಶಿಸಿ ಅಭಿನಯಿಸಿದರು. ಡಿ ಶಂಕರ್ ಸಿಂಗ್ ಮತ್ತು ವಿಠಲಾಚಾರ್ಯ ಜೊತೆಯಾಗಿ ನಿರ್ಮಿಸಿದ "ಜಗನ್ಮೋಹಿನಿ" ಚಿತ್ರದಲ್ಲಿ ನಾಯಕರಾಗಿ ಅಭಿನಯಿಸಿದಲ್ಲದೆ, 1951ರಲ್ಲಿ ನಿರ್ದೇಶಿಸಿ ಅಭಿನಯಿಸಿದ 'ರಾಜಾ ವಿಕ್ರಮ' ಚಿತ್ರ ಅವರಿಗೆ ದೊಡ್ಡ ಯಶಸ್ಸನ್ನು ತಂದು ಕೊಟ್ಟಿತು. ಎನ್ ಟಿ ರಾಮರಾವ್ ಅಭಿನಯಿಸಿದ 1957ರಲ್ಲಿ ತೆಲುಗು ಭಾಷೆಯಲ್ಲಿ ತಯಾರಾದ 'ನಳ ದಮಯಂತಿ' ಚಲನ ಚಿತ್ರವನ್ನು ನಿರ್ಮಾಣ ಮಾಡಿ ನಿರ್ದೇಶಿಸಿದರು. ಅವರು ಕನ್ನಡ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಹಲವಾರು ಚಲನ ಚಿತ್ರಗಳನ್ನು ನಿರ್ಮಿಸಿದ್ದಾರೆ ಮತ್ತು ನಿರ್ದೇಶಿಸಿದ್ದಾರೆ ಕೂಡ. ಕೆಂಪರಾಜ್ ಅರಸ್ ಅವರು ಚಿತ್ರ ನಿರ್ಮಿಸಿ, ನಿರ್ದೇಶಿಸಿ, ಅಭಿನಯಿಸಿ ಯಶಸ್ವಿಯಾಗಿದ್ದರೂ ಕೂಡ ಕೆಲವು ಚಿತ್ರಗಳಲ್ಲಿ ಆರ್ಥಿಕವಾಗಿ ಅವರಿಗೆ ಹೊಡೆತ ಬಿದ್ದಿತ್ತು. ಅವರು "ಕರ್ನಾಟಕ ಚಲನಚಿತ್ರ ಅಭಿವೃದ್ಧಿ ಮಂಡಳಿ" ಅಧ್ಯಕ್ಷರು ಕೂಡ ಆಗಿದ್ದರು. ಕೆಂಪರಾಜ್ ಅರಸ್ ಅವರು 1979 ರಲ್ಲಿ ಪ್ರಕಟವಾದ "ಅರವತ್ತು ವರ್ಷಗಳು" ಎಂಬ ಆತ್ಮಕಥೆಯನ್ನು ಬರೆದಿದ್ದಾರೆ. ಕೆಂಪರಾಜ್ ಅರಸ್ 1982ರ ಮೇ 18 ರಂದು ನಿಧನರಾದರು. ಚಿತ್ರರಂಗ ಬೆಳೆಯಲು ಕಾರಣೀಭೂತರಾದ ಅದೆಷ್ಟೋ ಮಹಾನೀಯರಲ್ಲಿ ಕೆಂಪರಾಜ್ ಅರಸ್ ಕೂಡ ಒಬ್ಬರಾಗಿದ್ದರು. ಅಂದಿನ ಕಾಲದಲ್ಲೇ ಚಿತ್ರರಂಗಕ್ಕೆ ಕೆಂಪರಾಜ್ ಅರಸ್ ಅವರು ನೀಡಿದ ಮಹತ್ತರವಾದ ಕೊಡುಗೆಯಿಂದ ಅವರು ಕರಾವಳಿ ತರಂಗಿಣಿ ಪತ್ರಿಕೆಯ ಈ ವಾರದ ಸಿನಿ ಲೋಕದ ಧ್ರುವತಾರೆಯಾಗಿದ್ದಾರೆ.










ಎನ್ನಾರ್ ಕೆ ವಿಶ್ವನಾಥ್
ENNAR K VISHWANATH







KARAVALI THARANGINI Weekly Owned, Editor, Published & Printed by Lalithasri Preetham Rai No.2-64/54(12), Pushparaj Nilaya, Jayanagara, 3rd 'A' Maroli Village, Dakshina Kannada, Karnataka - 575005.
email: karavalitharangini@gmail.com, web: karavalitharangini.com ph: 9880109212 Printed at Bhima Samskruthi Printers & Publishers, No 1182 14th Main Road Prakash Nagar, Bengaluru Karnataka-560021